# ಜಗದ್ಗುರು ಶ್ರೀ ಆದಿ ಶಂಕರಾಚಾರ್ಯರು

## (ಚಿತ್ರಾತ್ಮಕ ಜೀವನ ಚರಿತ್ರೆ ಮತ್ತು ಉಪದೇಶ)

ಜಗದ್ಗುರು ಶ್ರೀ ಆದಿಶಂಕರಾಚಾರ್ಯರ ಜೀವನ ಚರಿತ್ರೆಯುಳ್ಳ ಈ ಕಿರು ಪುಸ್ತಕವನ್ನು ಮೊದಲು 1988–89 ರಲ್ಲಿ ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯ ರಾಷ್ಟ್ರೀಯ ಶಂಕರ ಜಯಂತಿ ಮಹೋತ್ಸವದಲ್ಲಿ (1200ನೆಯ ಶಂಕರಜಯಂತಿ ಸಂದರ್ಭದಲ್ಲಿ) ಪ್ರಕಟಿಸಲಾಗಿತ್ತು. ಈ ಪ್ರಕಟನೆಯನ್ನು ಶೃಂಗೇರಿ ಶಾರದಾಪೀಠದ 35ನೆಯ ಪೀಠಾಧಿಪತಿಗಳು ಜಗದ್ಗುರು ಶ್ರೀಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ಮತ್ತು ಜಗದ್ಗುರು ಶ್ರೀಭಾರತೀತೀರ್ಥ ಮಹಾಸ್ವಾಮಿಗಳ (ಪ್ರಸ್ತುತ 36ನೆಯ ಪೀಠಾಧಿಪತಿಗಳು) ಅನುಗ್ರಹದೊಂದಿಗೆ ಹೊರತರಲಾಗಿತ್ತು.

ಕಾಲಟಿ ಸಮೀಪದ ಪೆರುಂಬಾವೂರಿನ ಕಲಾವಿದ ಸುಕುಮಾರನ್ ಅವರು ರಚಿಸಿದ ವರ್ಣಚಿತ್ರಗಳಿಂದ ಈ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಾಗಿದೆ. 1986ರಲ್ಲಿ ಜಗದ್ಗುರುಗಳವರ ಆದೇಶಾನುಸಾರ ಶೃಂಗೇರಿಯಲ್ಲಿ ಈ ಕಲಾಕೃತಿಗಳನ್ನು ಚಿತ್ರಿಸಿದ್ದು, ಪ್ರಸ್ತುತ ಈ ಕಲಾಕೃತಿಗಳನ್ನು ಶೃಂಗೇರಿಯ ಶ್ರೀಶಂಕರಾಚಾರ್ಯರ ದೇವಾಲಯದ ಬಳಿ ಇರುವ ಪ್ರವಚನಮಂದಿರದಲ್ಲಿ ನೋಡಬಹುದು.

**ಜಗದ್ಗುರು ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಸಂನ್ಯಾಸ ಸ್ವೀಕಾರದ 50ನೇ ವರ್ಷದ ಸ್ವರ್ಣಮಹೋತ್ಸವದ** ಅಂಗವಾಗಿ **"ಶ್ರೀಶಂಕರ ಸ್ತೋತ್ರ ವೈಭವ"** ಎಂಬ ಕಾರ್ಯಕ್ರಮದ ಮೂಲಕ ಪ್ರೌಢಶಾಲಾ ವಿದ್ಯಾರ್ಥಿಗಳಿಂದ ಶ್ರೀಶಂಕರಾಚಾರ್ಯರನ್ನು ಸ್ತುತಿಸುವ ಸ್ತೋತ್ರಗಳ ಸಾಮೂಹಿಕ ಪಠಣವನ್ನು **ಜಗದ್ಗುರು ಶ್ರೀಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳವರ** ಅಪ್ಪಣೆಯಂತೆ ದಿ.10.02.2024 ರಂದು ಹಮ್ಮಿಕೊಂಡಿರುವ ಸುಸಂದರ್ಭದಲ್ಲಿ ಈ ಗ್ರಂಥಕ್ಕೆ ಕೆಲವು ವಿಷಯಗಳನ್ನು ಸೇರಿಸಿ ಮೂರನೇ ಮುದ್ರಣವನ್ನು ಹೊರತರಲಾಗುತ್ತಿದೆ.

**ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ**
**ದಕ್ಷಿಣಾಮ್ನಾಯ ಶ್ರೀಶಾರದಾಪೀಠ, ಶೃಂಗೇರಿ**

**Jagadguru Sri Adi Shankaracharyaru (Chitratmaka Jeevana Charitre And Upadesha)**

*This is published during the 50th year of Sannyasa Sweekara of the Jagadguru Sri Sri Bharati Tirtha Mahaswamiji, the 36th Acharya of Dakshinamnaya Sri Sharada Peetham, Sringeri.*

Published by
& Printed at: Vidya Bharati Press
(An in-house publication wing of
Dakshinamnaya Sri Sharada Peetham, Sringeri)
Shankarapuram, Bangalore 560004
Ph: 080-23211168

2nd Edition: November 2018 (Copies: 5000)

3rd Edition: January 2024 (Copies: 20000)

Copyright: Dakshinamnaya Sri Sharada Peetham, Sringeri

Contribution Value: ₹ 40/-

This book is distributed at a highly subsidized value for the sustenance and propagation of Sanatana Dharma, and to reach all sections of the society. The contribution value received for this book is used for charitable purposes.


Copies Available at: Dakshinamnaya Sri Sharada Peetham, Sringeri

Website: www.sringeri.net

Email: adminoffice@sringeri.net



1. ಬ್ರಹ್ಮವಿಷ್ಣು ಮೊದಲಾದ ದೇವತೆಗಳು ಮತ್ತು ಮಹರ್ಷಿಗಳು 8ನೆಯ ಶತಮಾನದ ಕಾಲದಲ್ಲಿ ಭೂಮಿಯಲ್ಲಿ ಕ್ಷೀಣಿಸುತ್ತಿರುವ ನಮ್ಮ ಸನಾತನಧರ್ಮವನ್ನು ನೋಡಿ ಚಿಂತಿತರಾಗಿ ಕೈಲಾಸಕ್ಕೆ ಹೋಗಿ ಇದನ್ನು ಉದ್ಧಾರ ಮಾಡಬೇಕೆಂದು ಪರಮಶಿವನನ್ನು ಪ್ರಾರ್ಥಿಸಿದರು. ಪರಮಶಿವನು ಜಗದ್ಗುರು ಶ್ರೀಶಂಕರಭಗವತ್ಪಾದಾಚಾರ್ಯರಾಗಿ ಅವತಾರ ಮಾಡಲು ಸಂಕಲ್ಪಿಸಿದನು.



2. ಅದೇ ಕಾಲದಲ್ಲಿ ಕೇರಳದ "ಕಾಲಟಿ" ಎಂಬ ಗ್ರಾಮದಲ್ಲಿ ಆರ್ಯಾಂಬೆ ಶಿವಗುರುಗಳೆಂಬ ಪುಣ್ಯದಂಪತಿಗಳು ಸಂತಾನಾರ್ಥಿಗಳಾಗಿ ತ್ರಿಶೂರಿನ ಪರಮಶಿವನನ್ನು (ವೃಷಾಚಲೇಶ್ವರನೆಂಬ ವಡಕ್ಕುನ್ನಾಥನನ್ನು) ಅತ್ಯಂತ ನಿಷ್ಠೆಯಿಂದ ಆರಾಧನೆ ಮಾಡುತ್ತಿದ್ದರು.



3. ಅವರ ತಪಸ್ಸಿಗೆ ಮೆಚ್ಚಿದ ಪರಮಶಿವನು ಶಿವಗುರುವಿಗೆ ಸ್ವಪ್ನದಲ್ಲಿ ದರ್ಶನ ನೀಡಿ "ಅಲ್ಪಾಯುಷಿಯೂ ಸರ್ವಜ್ಞನೂ ಆದ ಒಬ್ಬ ಪುತ್ರನು ಬೇಕೋ, ದೀರ್ಘಕಾಲ ಬಾಳುವ ಮಂದಬುದ್ಧಿಗಳಾದ ಬಹುಪುತ್ರರು ಬೇಕೋ" ಎಂದು ಕೇಳಿದಾಗ ಅಲ್ಪಾಯುಷಿಯಾದರೂ ಸರ್ವಜ್ಞನಾದ ಒಬ್ಬ ಪುತ್ರನೇ ಬೇಕೆಂದು ಶಿವಗುರು ಪ್ರಾರ್ಥಿಸಲು ತಥಾಸ್ತು ಎಂದು ಪರಮಶಿವನು ಅನುಗ್ರಹಿಸಿದನು.



4. ತದನಂತರ ವೈಶಾಖ ಶುಕ್ಲ ಪಂಚಮಿಯ ಶುಭದಿನದಂದು ಪರಮಶಿವನ ಅಂಶದಿಂದ ಜನಿಸಿದ ಪುತ್ರನಿಗೆ “ಶಂಕರ” ಎಂದು ನಾಮಕರಣ ಮಾಡಲಾಯಿತು. ಎಲ್ಲರಿಗೂ ಶುಭವನ್ನುಂಟುಮಾಡುವವನು ಎಂದು ಈ ಹೆಸರಿನ ಅರ್ಥ. ಬಾಲಶಂಕರನು ಎರಡನೆಯ ವರ್ಷದಲ್ಲೇ ಕಾವ್ಯಪುರಾಣಾದಿಗಳಲ್ಲಿ ಪ್ರಾವೀಣ್ಯವನ್ನು ಹೊಂದಿ ಎಲ್ಲರಿಗೂ ಆಶ್ಚರ್ಯವುಂಟುಮಾಡಿದನು.



5. ಐದನೆಯ ವಯಸ್ಸಿನಲ್ಲಿ ಉಪನಯನಸಂಸ್ಕಾರವನ್ನು ಪಡೆದ ನಂತರ ಗುರುಕುಲದಲ್ಲಿ ಬಾಲಶಂಕರರು ತಮ್ಮ ಅಪಾರವಾದ ಪ್ರತಿಭೆಯಿಂದ ಅತ್ಯಲ್ಪಕಾಲದಲ್ಲಿಯೇ ಸಕಲವೇದಶಾಸ್ತ್ರಗಳಲ್ಲಿ ಪಾರಂಗತರಾಗಿ ಪಾಠ ಮಾಡುವ ಗುರುಗಳನ್ನೇ ಬೆರಗಾಗಿಸಿದರು.



6. ಬ್ರಹ್ಮಚಾರಿಧರ್ಮದಂತೆ ಭಿಕ್ಷಾಟನೆ ಮಾಡುತ್ತಿದ್ದ ಶಂಕರರಿಗೆ ಒಬ್ಬ ಬಡಗೃಹಿಣಿಯು ಭಕ್ತಿಯಿಂದ ಒಣನೆಲ್ಲಿಕಾಯಿಯನ್ನು ಸಮರ್ಪಿಸಿದಳು. ಅವಳ ಬಡತನವನ್ನು ನೋಡಿ ವಿಚಲಿತರಾದ ಶಂಕರರು ತಕ್ಷಣವೇ ಮಹಾಲಕ್ಷ್ಮಿಯನ್ನು ಸ್ತುತಿಸಿ ಆ ಮನೆಯಲ್ಲಿ ಚಿನ್ನದ ನೆಲ್ಲಿಕಾಯಿಗಳ ಮಳೆ ಸುರಿಯುವಂತೆ ಮಾಡಿದರು.



7. ಶಂಕರರ ಅಪಾರಮಹಿಮೆಯನ್ನು ತಿಳಿದ ಕೇರಳರಾಜನು ಅನೇಕ ಸುವರ್ಣರತ್ನಗಳನ್ನು ಕಾಣಿಕೆಯಾಗಿ ಸಮರ್ಪಿಸಿದಾಗ ಬ್ರಹ್ಮಚಾರಿಗಳಾದ ನಾವು ಇವುಗಳನ್ನು ಸ್ವೀಕರಿಸುವುದು ಉಚಿತವಲ್ಲವೆಂದು ಹೇಳಿ ಅವುಗಳನ್ನು ಬಡಜನರಿಗೆ ಹಂಚಿಸಿದರು. ಕೇರಳರಾಜನು ತಾನು ಬರೆದ ಮೂರು ನಾಟಕಗಳನ್ನು ಶಂಕರರ ಎದುರಿಗೆ ಪಠಿಸಿ ಸಮರ್ಪಿಸಿದನು.



8. ಬೇಸಿಗೆಯ ಒಂದು ಮಧ್ಯಾಹ್ನ ಆರ್ಯಾಂಬೆಯು ಪೂರ್ಣಾನದಿಯಲ್ಲಿ ಸ್ನಾನಾರ್ಥ ಹೋಗಿ ಮಾರ್ಗಮಧ್ಯದಲ್ಲಿ ಬಿಸಿಲಿಗೆ ಬಳಲಿ ಪ್ರಜ್ಞೆ ತಪ್ಪಿ ಬಿದ್ದಾಗ ಶಂಕರರು ತಾಯಿಯನ್ನು ಮನೆಗೆ ಕರೆದುಕೊಂಡು ಬಂದು ಔಷಧಾದ್ಯುಪಚಾರಗಳನ್ನು ಮಾಡಿದರು.



9. ವೃದ್ಧೆಯಾದ ತಮ್ಮ ತಾಯಿಯ ಸೌಕರ್ಯಕ್ಕಾಗಿ ನದೀದೇವತೆಯನ್ನು ಪ್ರಾರ್ಥನೆ ಮಾಡಿದಾಗ ನದೀದೇವತೆಯು ಪ್ರಸನ್ನಳಾಗಿ ತನ್ನ ದಿಕ್ಕನ್ನೇ ಬದಲಾಯಿಸಿಕೊಂಡು ಶಂಕರರ ಮನೆಯ ಹತ್ತಿರದಲ್ಲಿ ಪ್ರವಹಿಸಿದಳು.



10. ಸಾಂಸಾರಿಕಜೀವನದಲ್ಲಿ ಅನಾಸಕ್ತರಾದ ಶಂಕರರು ತಮ್ಮ ಅವತಾರಕಾರ್ಯವನ್ನು ನೆರವೇರಿಸಲು ಸಂನ್ಯಾಸಸ್ವೀಕಾರ ಮಾಡಬಯಸಿದರು. ಅದಕ್ಕೆ ತಕ್ಕಂತೆ ಒಮ್ಮೆ ಪೂರ್ಣಾನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಮೊಸಳೆಯೊಂದು ಅವರ ಪಾದವನ್ನು ಹಿಡಿಯಿತು. ಸಂನ್ಯಾಸವನ್ನು ಸ್ವೀಕರಿಸಿದರೆ ಮೊಸಳೆಯು ಬಿಡುತ್ತದೆಯೆಂದು ತಿಳಿದ ಆರ್ಯಾಂಬೆಯು ಸಂನ್ಯಾಸಕ್ಕೆ ಅನುಮತಿಯನ್ನು ನೀಡಿದಳು. ಶಂಕರರು ಆತುರಸಂನ್ಯಾಸವನ್ನು ಸ್ವೀಕರಿಸಿದರು. ಆಗ ಮೊಸಳೆಯು ಬಿಟ್ಟಿತು.



11. ಶಂಕರರು ತಮ್ಮ ತಾಯಿಯ ಪಾಲನೆಯ ಜವಾಬ್ದಾರಿಯನ್ನು ಬಂಧುಗಳಿಗೆ ವಹಿಸಿ ಅದಕ್ಕಾಗಿ ತಮ್ಮ ತಂದೆಯ ಸಂಪತ್ತನ್ನು ಅವರಿಗೆ ನೀಡಿ ಎಲ್ಲ ವ್ಯವಸ್ಥೆಗಳನ್ನೂ ಮಾಡಿ ತಾಯಿಯ ಆಶೀರ್ವಾದಗಳನ್ನು ಪಡೆದು ಕ್ರಮಸಂನ್ಯಾಸವನ್ನು ಸ್ವೀಕರಿಸಲು ಸದ್ಗುರುಗಳನ್ನು ಅನ್ವೇಷಿಸುತ್ತಾ ಮನೆಯಿಂದ ಹೊರಟರು.




12. ನಮರ್ದಾನದೀತೀರದ ಗುಹೆಯೊಂದರಲ್ಲಿ ತಪೋನಿರತರಾದ ಶ್ರೀಗೋವಿಂದ ಭಗವತ್ಪಾದಾಚಾರ್ಯರನ್ನು ತಮ್ಮ ಗುರುಗಳನ್ನಾಗಿ ಆಶ್ರಯಿಸಿ ಅವರಿಂದ ಕ್ರಮಸಂನ್ಯಾಸ ಮತ್ತು ಪ್ರಣವಮಹಾವಾಕ್ಯೋಪದೇಶಗಳನ್ನು ಪಡೆದರು. ಶ್ರೀಶಂಕರರು ಸರ್ವಜ್ಞರಾಗಿದ್ದರೂ ಗುರುಶಿಷ್ಯಪರಂಪರೆಯ ಸಂಪ್ರದಾಯದ ಸಂರಕ್ಷಣೆಗೋಸ್ಕರ ಗುರುಮುಖದಿಂದಲೇ ಸಕಲಶಾಸ್ತ್ರಗಳನ್ನು ಅಧ್ಯಯನ ಮಾಡಿದರು.




13. ಮಳೆಗಾಲದಲ್ಲಿ ನರ್ಮದಾನದಿಯು ಉಕ್ಕಿಹರಿದು ಎಲ್ಲ ಗ್ರಾಮಗಳೂ ಮುಳುಗಿ ಜನರೆಲ್ಲರೂ ಹಾಹಾಕಾರ ಮಾಡುತ್ತಿರಲು ಶಂಕರರು ತಮ್ಮ ಕಮಂಡಲುವಿನಲ್ಲಿ ಇಡೀ ಪ್ರವಾಹದ ನೀರನ್ನು ಅಡಗಿಸಿ ಜನರನ್ನು ಕಾಪಾಡಿದರು. ಇದನ್ನು ನೋಡಿದ ಗೋವಿಂದಭಗವತ್ಪಾದರು ಶ್ರೀಶಂಕರರನ್ನು ಸನಾತನಧರ್ಮ ಮತ್ತು ಅದ್ವೈತಸಿದ್ಧಾಂತವನ್ನು ರಕ್ಷಿಸಲು ಪ್ರಸ್ಥಾನತ್ರಯ(ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆ)ಭಾಷ್ಯಾದಿ ಗ್ರಂಥಗಳನ್ನು ರಚನೆ ಮಾಡಿ ಪ್ರಚಾರ ಮಾಡಲು ಆದೇಶಿದರು.




14. ಗುರುಗಳ ಅಪ್ಪಣೆಯಂತೆ ಕಾಶಿಕ್ಷೇತ್ರಕ್ಕೆ ಆಗಮಿಸಿದ ಶ್ರೀಶಂಕರರ ಬಳಿ ಬ್ರಹ್ಮವಿದ್ಯೆಯನ್ನು ಕಲಿಯಲು ಅನೇಕಶಿಷ್ಯರು ಆಗಮಿಸಿದರು. ಅವರಲ್ಲಿ ಮೊದಲನೆಯ ಶಿಷ್ಯ ಮತ್ತು ಅತ್ಯಂತ ಗುರುಭಕ್ತಿಸಂಪನ್ನನಾದವನು ಸನಂದನನು. ಒಮ್ಮೆ ಗಂಗಾನದಿಯ ಆಚೆದಡದಲ್ಲಿದ್ದ ಸನಂದನನನ್ನು ಶ್ರೀಶಂಕರರು ಕರೆದಾಗ ಸನಂದನನು ಕಿಂಚಿತ್ತೂ ಯೋಚಿಸದೇ ಗಂಗಾಪ್ರವಾಹದಲ್ಲಿ ಪಾದವನ್ನು ಇರಿಸಿದಾಗ ಇವನ ಗುರುಭಕ್ತಿಗೆ ಮೆಚ್ಚಿದ ಗಂಗೆಯು ಪಾದವನ್ನು ಇರಿಸಿದ ಪ್ರತಿಯೊಂದು ಜಾಗದಲ್ಲೂ ಒಂದು ಪದ್ಮದ ಹೂವನ್ನು ಸೃಷ್ಟಿಸಿದಳು. ಆ ಪದ್ಮಗಳ ಮೇಲೆ ಪಾದವನ್ನು ಇಟ್ಟು ಗಂಗೆಯನ್ನು ದಾಟಿದ್ದರಿಂದ ಅಂದಿನಿಂದ ಸನಂದನನು ಪದ್ಮಪಾದರೆಂದು ಪ್ರಸಿದ್ಧನಾದನು.



15. ಕಾಶಿಯಲ್ಲಿ ಒಂದು ಮಧ್ಯಾಹ್ನ ಗಂಗಾಸ್ನಾನಕ್ಕಾಗಿ ಶ್ರೀಶಂಕರರು ತೆರಳುತ್ತಿದ್ದಾಗ ದಾರಿಯಲ್ಲಿ ಕಾಶಿವಿಶ್ವನಾಥನು ಒಬ್ಬ ಅಂತ್ಯಜನ ರೂಪದಲ್ಲಿ ನಾಲ್ಕು ನಾಯಿಗಳೊಂದಿಗೆ ಎದುರಿಗೆ ಬಂದು ಪರಮೋಚ್ಚವಾದ ವೇದಾಂತವಿಚಾರದ ಚರ್ಚೆಯನ್ನು ಮಾಡಿದನು. ಅವನನ್ನು ಬ್ರಹ್ಮಜ್ಞಾನಿಯೆಂದು ತಿಳಿದ ಶ್ರೀಶಂಕರರು ತಕ್ಷಣವೇ ಅವನಿಗೆ ನಮಸ್ಕಾರ ಮಾಡಿದರು. ಪ್ರಸನ್ನನಾದ ಪರಮಶಿವನು ನಾಲ್ಕುವೇದಗಳೊಂದಿಗೆ ತನ್ನ ನಿಜಸ್ವರೂಪವನ್ನು ತೋರಿಸಿ ಮಾಡಬೇಕಾದ ಧರ್ಮೋದ್ಧಾರ ಕಾರ್ಯಗಳನ್ನು ಆದೇಶಿಸಿ ಅದೃಶ್ಯನಾದನು. ನಂತರ ಶ್ರೀಶಂಕರರು ಬದರೀನಾಥಕ್ಷೇತ್ರಕ್ಕೆ ಹೋಗಿ ಪ್ರಸ್ಥಾನತ್ರಯಭಾಷ್ಯಗಳನ್ನು ರಚಿಸಿದರು.



16. ಪುನಃ ಕಾಶಿಗೆ ಆಗಮಿಸಿದ ಶ್ರೀಶಂಕರಾಚಾರ್ಯರನ್ನು ಪರೀಕ್ಷಿಸಲು ವೇದವ್ಯಾಸರು ವೃದ್ಧಬ್ರಾಹ್ಮಣನ ರೂಪದಲ್ಲಿ ಬಂದು ಅದ್ವೈತಸಿದ್ಧಾಂತದ ಬಗ್ಗೆ ಅನೇಕವಿಧವಾಗಿ ಪ್ರಶ್ನೆಗಳನ್ನು ಕೇಳಿದರು. ಅವರ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿದ ನಂತರ ಪ್ರಸನ್ನರಾದ ವೇದವ್ಯಾಸರು ತಮ್ಮ ನಿಜರೂಪವನ್ನು ತೋರಿಸಿ ಶ್ರೀಶಂಕರಾಚಾರ್ಯರನ್ನು ಬಹಳವಾಗಿ ಮೆಚ್ಚಿಕೊಂಡು ಅನುಗ್ರಹಿಸಿದರು.



17. ಶ್ರೀಶಂಕರರು ತಮ್ಮ ಭಾಷ್ಯಕ್ಕೆ ವಾರ್ತಿಕವನ್ನು ಕುಮಾರಿಲಭಟ್ಟರಿಂದ ಬರೆಸಬೇಕೆಂಬ ಉದ್ದೇಶದಿಂದ ಪ್ರಯಾಗಕ್ಕೆ ಬಂದರು. ಆದರೇ ಆ ಸಮಯಕ್ಕೆ ಕುಮಾರಿಲರು ಪ್ರಾಯಶ್ಚಿತ್ತಾರ್ಥವಾಗಿ ತುಷಾಗ್ನಿಯನ್ನು (ಉರಿಯುತ್ತಿದ್ದ ಹೊಟ್ಟು) ಪ್ರವೇಶಿಸಿದ್ದರಿಂದ ಅದು ಸಾಧ್ಯವಾಗಲಿಲ್ಲ. ಶ್ರೀಶಂಕರರು ತಮ್ಮ ಭಾಷ್ಯವನ್ನು ನೋಡಿ ಪ್ರಸನ್ನಗೊಂಡ ಕುಮಾರಿಲ ಭಟ್ಟರ ಸೂಚನೆಯಂತೆ ಅವರ ಶಿಷ್ಯರೂ ಮಹಾಕರ್ಮಠರೂ ಆದ ಮಂಡನಮಿಶ್ರರನ್ನು ವಾದದಲ್ಲಿ ಸೋಲಿಸಲು ಮಾಹಿಷ್ಮತೀನಗರಕ್ಕೆ ಆಗಮಿಸಿದರು.




18. ಶ್ರೀಶಂಕರಾಚಾರ್ಯರು ಪ್ರಸಿದ್ಧ ವಿದ್ವಾಂಸರಾದ ಮಂಡನಮಿಶ್ರರನ್ನು ಸಂದರ್ಶಿಸಿ, ಅವರನ್ನು ವಾದಕ್ಕೆ ಆಹ್ವಾನಿಸುತ್ತಾರೆ. ಮಂಡನಮಿಶ್ರರ ಪತ್ನಿ ಉಭಯಭಾರತಿಯು ಸಾಕ್ಷಾತ್ ಸರಸ್ವತಿಯ ಅವತಾರವಾಗಿದ್ದು, ಹಲವು ದಿನಗಳವರೆಗೆ ನಡೆದ ಇವರೀರ್ವರ ವಾದದಲ್ಲಿ ಮಧ್ಯಸ್ಥಿಕೆಯನ್ನು ವಹಿಸಿದಳು.



19. ವಾದದಲ್ಲಿ ಅಂತಿಮವಾಗಿ ಶ್ರೀಶಂಕರಾಚಾರ್ಯರು ಮಂಡನಮಿಶ್ರರನ್ನು ಸೋಲಿಸುತ್ತಾರೆ. ವಾದದ ನಿಯಮವನ್ನು ಪಾಲಿಸಿ, ಮಂಡನರು ಸಂನ್ಯಾಸವನ್ನು ಸ್ವೀಕರಿಸಿ, ಸುರೇಶ್ವರ ಎಂಬ ಹೆಸರನ್ನು ಪಡೆಯುತ್ತಾರೆ. ನಂತರ ಶ್ರೀಶಂಕರಾಚಾರ್ಯರಿಂದ ವೇದಾಂತ ತತ್ತ್ವದ ಉಪದೇಶವನ್ನು ಪಡೆದು, ಅವರ ಭಾಷ್ಯದ ಮೇಲೆ ವಾರ್ತಿಕಗಳನ್ನು ಮತ್ತು ನೈಷ್ಕರ್ಮ್ಯಸಿದ್ಧಿ ಎಂಬ ಪ್ರಸಿದ್ಧವಾದ ಗ್ರಂಥವನ್ನು ರಚಿಸುತ್ತಾರೆ. ಅದ್ವೈತ ಸಿದ್ಧಾಂತ ಮತ್ತು ಸನಾತನಧರ್ಮದ ಪ್ರಚಾರಕ್ಕೋಸ್ಕರ ಶ್ರೀಶಂಕರಾಚಾರ್ಯರು ತಮ್ಮ ಮುಖ್ಯ ಶಿಷ್ಯರೊಂದಿಗೆ ದೇಶಾದ್ಯಂತ ಸಂಚಾರಮಾಡುತ್ತ, ವಿವೇಕಚೂಡಾಮಣಿ, ಉಪದೇಶಸಾಹಸ್ರಿ, ಆತ್ಮಬೋಧ ಇತ್ಯಾದಿ ಅನೇಕ ಪ್ರಕರಣಗ್ರಂಥಗಳನ್ನು, ಗಣೇಶಪಂಚರತ್ನ, ಸೌಂದರ್ಯಲಹರಿ, ಶಿವಾನಂದಲಹರಿ, ವಿಷ್ಣುಷಟ್ಪದಿ, ಸುಬ್ರಹ್ಮಣ್ಯಭುಜಂಗ ಇತ್ಯಾದಿ ಸ್ತೋತ್ರಗಳನ್ನು ರಚಿಸುತ್ತಾರೆ.



20. ಒಬ್ಬ ಕಾಪಾಲಿಕನು ತಾನು ಮಾಡುತ್ತಿರುವ ಭೈರವೋಪಾಸನೆಯು ಸಫಲವಾಗುವುದಕ್ಕೆ ಸರ್ವಜ್ಞರಾದ ಶ್ರೀಶಂಕರರ ತಲೆಯನ್ನು ಬಲಿಯಾಗಿ ನೀಡಲು ಕೇಳಿದಾಗ ವಿರಾಗಿಶಿರೋಮಣಿಗಳಾದ ಶ್ರೀಶಂಕರರು ಅದಕ್ಕೆ ಒಪ್ಪಿದರು. ಅವನು ಶ್ರೀಶಂಕರರ ಶಿರಚ್ಛೇದವನ್ನು ಮಾಡಲು ಬಂದಾಗ ಪದ್ಮಪಾದಾಚಾರ್ಯರು ತಮ್ಮ ಗುರುಗಳನ್ನು ಕಾಪಾಡಿಕೊಳ್ಳಲು ನರಸಿಂಹಸ್ವಾಮಿಯನ್ನು ಪ್ರಾರ್ಥಿಸಿದರು. ಆಗ ನರಸಿಂಹಸ್ವಾಮಿಯು ಪದ್ಮಪಾದರಲ್ಲಿ ಪ್ರತ್ಯಕ್ಷನಾಗಿ ಆ ಕಾಪಾಲಿಕನನ್ನು ಸಂಹರಿಸಿದನು.



21. ಮೂಕಾಂಬಿಕಾಕ್ಷೇತ್ರವಾದ ಕೊಲ್ಲೂರಿನ ಸಮೀಪದ ಶ್ರೀಬಲಿಯೆಂಬ ಅಗ್ರಹಾರದಲ್ಲಿ ಮಂದಬುದ್ಧಿಯಂತಿರುವ ತಮ್ಮ ಮಗನನ್ನು ತಂದೆತಾಯಿಗಳು ಶ್ರೀಶಂಕರರ ದರ್ಶನಕ್ಕೆ ಕರೆದುಕೊಂಡು ಬಂದಾಗ ಶಂಕರರು "ನೀನು ಯಾರು? ಏಕೆ ಜಡನಂತೆ ವರ್ತಿಸುತ್ತಿದ್ದಿ? ಎಂದು ಕೇಳಿದ ತಕ್ಷಣ ಆ ಬಾಲಕನು ಪರಬ್ರಹ್ಮತತ್ತ್ವವನ್ನು ತಿಳಿಸುವ ಗಂಭೀರವಾದ ಶ್ಲೋಕಗಳನ್ನು ಪಠಿಸಿದನು. ಆಗ ಶಂಕರರು ಅವನಿಗೆ ಸಂನ್ಯಾಸದೀಕ್ಷೆಯನ್ನು ನೀಡಿ "ಹಸ್ತಾಮಲಕ" (ವೇದಾಂತ ತತ್ತ್ವವನ್ನು ಕೈಯಲ್ಲಿರುವ ನೆಲ್ಲಿಕಾಯಿಯಂತೆ ಸ್ಪಷ್ಟವಾಗಿ ನಿರೂಪಿಸಿದ್ದರಿಂದ) ಎಂಬ ಹೆಸರನ್ನು ನೀಡಿದರು. ಶ್ರೀಹಸ್ತಾಮಲಕಾಚಾರ್ಯರು ಶ್ರೀಶಂಕರರ ಪ್ರಧಾನಶಿಷ್ಯರಲ್ಲೊಬ್ಬರಾದರು.



22. ಶ್ರೀಶಂಕರರು ಶೃಂಗೇರಿಗೆ ಆಗಮಿಸಿದಾಗ ಬೇಸಿಗೆಯಲ್ಲಿ ಬಿಸಿಲಿನಿಂದ ನರಳುತ್ತಿದ್ದ ಕಪ್ಪೆಗೆ ಒಂದು ಹಾವು ವೈರವನ್ನು ಮರೆತು ತನ್ನ ಹೆಡೆಯನ್ನು ಬಿಚ್ಚಿ ನೆರಳನ್ನು ನೀಡುತ್ತಿರುವ ಅಪೂರ್ವದೃಶ್ಯವನ್ನು ನೋಡಿ ಆ ಪ್ರದೇಶವು ನಿರ್ವೈರಕ್ಷೇತ್ರವೆಂದು ಗುರುತಿಸಿ ಜಗನ್ಮಾತೆ ಶ್ರೀಶಾರದಂಬೆಯನ್ನು ಪ್ರತಿಷ್ಠಾಪಿಸಿ ತಾವು ಸ್ಥಾಪನೆ ಮಾಡಲು ಬಯಸಿದ ದಕ್ಷಿಣಾಮ್ನಾಯ ಶಾರದಾಪೀಠವನ್ನು ಸ್ಥಾಪಿಸಿದರು. ಅಲ್ಲಿಯೇ ಸ್ವಲ್ಪಕಾಲ ವಾಸ್ತವ್ಯ ಮಾಡಿದರು.



23. ಶೃಂಗೇರಿಯಲ್ಲಿ ತಮ್ಮ ಪರಮಭಕ್ತನಾದ ಗಿರಿಯೆಂಬ ಶಿಷ್ಯನಿಗೆ ಅವನ ಗುರುಭಕ್ತಿಗೆ ಮೆಚ್ಚಿ ಸಮಸ್ತವಿದ್ಯೆಗಳನ್ನು ಕರುಣಿಸಿದರು. ತಕ್ಷಣವೇ ಗಿರಿಯು ಶ್ರೀಶಂಕರರನ್ನು ಸ್ತುತಿಸುವ ಅದ್ಭುತವಾದ ತೋಟಕಾಷ್ಟಕವನ್ನು ರಚಿಸಿದನು. ಅಂದಿನಿಂದ ಗಿರಿಯು "ತೋಟಕಾಚಾರ್ಯ" ಎಂಬ ಹೆಸರಿನಿಂದ ಪ್ರಸಿದ್ಧನಾಗಿ ಶ್ರೀಶಂಕರರ ಪ್ರಧಾನಶಿಷ್ಯರಲ್ಲೊಬ್ಬನಾದನು.



24. ತಮ್ಮ ತಾಯಿ ಆರ್ಯಾಂಬೆಯು ಕೊನೆಯ ಕಾಲದಲ್ಲಿದ್ದು ತಮ್ಮ ದರ್ಶನವನ್ನು ಮಾಡಲು ಬಯಸುತ್ತಿರುವುದನ್ನು ಯೋಗದೃಷ್ಟಿಯಿಂದ ತಿಳಿದ ಶ್ರೀಶಂಕರರು ತಕ್ಷಣವೇ ಕಾಲಟಿ ತಲುಪಿ ಆರ್ಯಾಂಬೆಗೆ ದರ್ಶನ ಕೊಟ್ಟು ವಿಷ್ಣುಸಾಯುಜ್ಯವನ್ನು ಕರುಣಿಸಿದರು.



25. ಕೇರಳರಾಜನು ಶ್ರೀಶಂಕರರ ದರ್ಶನ ಮಾಡಿ ತಾನು ತುಂಬಾ ಕಷ್ಟಪಟ್ಟು ರಚಿಸಿದ ನಾಟಕಗಳು ಬೆಂಕಿಯ ಅವಗಡದಲ್ಲಿ ಸುಟ್ಟುಹೋದ ವಿಷಯವನ್ನು ನಿವೇದಿಸಿ ದುಃಖಿತನಾದನು. ಆಗ ಶ್ರೀಶಂಕರರು ಚಿಂತಿಸಬೇಡವೆಂದು ರಾಜನಿಗೆ ಹೇಳಿ ಬಾಲ್ಯದಲ್ಲಿ ಆ ರಾಜನ ಮುಖದಿಂದ ಶ್ರವಣ ಮಾಡಿದ ಇಡೀ ನಾಟಕಗಳನ್ನು ನೆನೆಪಿಟ್ಟುಕೊಂಡು ಅಕ್ಷರಶಃ ಹಾಗೆಯೇ ಹೇಳಿ ಪುನಃ ಬರೆಸಿದರು.



26. ಸನಾತನಧರ್ಮದ ಪುನರುಜ್ಜೀವನ ಮತ್ತು ಅವೈದಿಕ ಮತಗಳ ನಿರಾಕರಣೆಗೋಸ್ಕರ ರಾಷ್ಟ್ರಾದ್ಯಂತ ಕೈಗೊಂಡ ವಿಜಯ ಯಾತ್ರೆಯನ್ನು ಪೂರ್ಣಗೊಳಿಸಿ ಶ್ರೀಶಂಕರಾಚಾರ್ಯರು ಕಾಶ್ಮೀರದಲ್ಲಿ ಸರ್ವಜ್ಞಪೀಠವನ್ನು ಅಲಂಕರಿದರು. ಮನುಕುಲದ ಉದ್ಧಾರಕ್ಕಾಗಿ, ಆಧ್ಯಾತ್ಮ ಸಾಧನೆಗಾಗಿ ಮತ್ತು ಮುಕ್ತಿಯ ಮಾರ್ಗದಲ್ಲಿ ಸಾಗಲು ಅವರ ಕೃತಿಗಳು ಈಗಲೂ ಮಾರ್ಗದರ್ಶಕವಾಗಿವೆ.



27. ತಮ್ಮ 32ನೆಯ ವಯಸ್ಸಿನಲ್ಲಿ ಕೇದಾರನಾಥಕ್ಷೇತ್ರದಲ್ಲಿ ಶಿಷ್ಯರೆಲ್ಲರಿಗೂ ಕೊನೆಯ ಬಾರಿ ದರ್ಶನ ನೀಡಿ ತಮ್ಮ ಅವತಾರವನ್ನು ಸಮಾಪ್ತಿಗೊಳಿಸಿ ಪುನಃ ಕೈಲಾಸಕ್ಕೆ ಮರಳಿದರು.

ಶ್ರುತಿಸ್ಮೃತಿ–ಪುರಾಣಾನಾಂ ಆಲಯಂ ಕರುಣಾಲಯಮ್ । ನಮಾಮಿ ಭಗವತ್ಪಾದಶಂಕರಂ ಲೋಕಶಂಕರಮ್ ॥

ಶ್ರುತಿ (ವೇದಗಳು), ಸ್ಮೃತಿ (ಧರ್ಮಶಾಸ್ತ್ರಗಳು) ಮತ್ತು ಪುರಾಣಗಳಿಗೆ ಆಲಯರಾಗಿರುವ, ಲೋಕಕ್ಕೆ ಮಂಗಳವನ್ನುಂಟು ಮಾಡುವ ಕರುಣಾಶಾಲಿಗಳಾದ ಶ್ರೀಶಂಕರಭಗವತ್ಪಾದರಿಗೆ ನಮಿಸುತ್ತೇನೆ.

## ಜಗದ್ಗುರು ಶ್ರೀ ಶಂಕರ ಭಗವತ್ಪಾದಾಚಾರ್ಯರು (788-820)

| | |
|---|---|
| ಅವತಾರದ ದಿನ | ವೈಶಾಖ ಶುಕ್ಲ ಪಂಚಮಿ |
| ಅವತಾರ ಕಾಲ | 788 |
| ಅವತಾರ ಸಮಾಪ್ತಿಕಾಲ | 820 |
| ಜೀವನಕಾಲ | 32 ವರ್ಷಗಳು |
| ತಾಯಿ, ತಂದೆ | ಆರ್ಯಾಂಬೆ, ಶಿವಗುರು |
| ಅವತಾರ ಸ್ಥಳ | ಕೇರಳದ ಪೂರ್ಣಾನದಿ ತೀರದ ಕಾಲಟಿ (ಕೇರಳ ರಾಜ್ಯದ ಕೊಚ್ಚಿನ್ ಹತ್ತಿರ) |
| ಅವತಾರ ಸಮಾಪ್ತಿ ಸ್ಥಳ | ಕೇದಾರನಾಥ ಕ್ಷೇತ್ರ |
| ಸಂನ್ಯಾಸ ಸ್ವೀಕರಿಸಿದ ವಯಸ್ಸು | 8ನೇ ವರ್ಷ |
| ಸಂನ್ಯಾಸ ಸ್ವೀಕರಿಸಿದ ಸ್ಥಳ | ಓಂಕಾರೇಶ್ವರ ಜ್ಯೋತಿರ್ಲಿಂಗಕ್ಷೇತ್ರ ಮಧ್ಯಪ್ರದೇಶ |
| ಗುರುಗಳು | ಶ್ರೀ ಗೋವಿಂದ ಭಗವತ್ಪಾದಾಚಾರ್ಯರು |
| ಪ್ರಸ್ಥಾನತ್ರಯಗಳು | ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳು |
| ಸಿದ್ಧಾಂತಕ್ಕೆ ಪ್ರಮಾಣ | ಉಪನಿಷತ್ತುಗಳು ಬ್ರಹ್ಮಸೂತ್ರಗಳು ಪುರಾಣ ಇತ್ಯಾದಿಗಳು |
| ಪೀಠಗಳ ಪ್ರಥಮಾಚಾರ್ಯರು | ಶ್ರೀಹಸ್ತಾಮಲಕಾಚಾರ್ಯರು, ಶ್ರೀಸುರೇಶ್ವರಾಚಾರ್ಯರು, ಶ್ರೀಪದ್ಮಪಾದಾಚಾರ್ಯರು, ಶ್ರೀತೋಟಕಾಚಾರ್ಯರು |
| ಶೃಂಗೇರಿ ಶಾರದಾಪೀಠದ ಮೊದಲ ಅಧಿಪತಿಗಳು | ಶ್ರೀಸುರೇಶ್ವರಾಚಾರ್ಯರು |
| ಸರ್ವಜ್ಞ ಪೀಠಾರೋಹಣ | ಕಾಶ್ಮೀರದಲ್ಲಿ |

## ಶಂಕರರು ಪ್ರತಿಪಾದಿಸಿದ ಸಿದ್ಧಾಂತ ; ಅದ್ವೈತ ಸಿದ್ಧಾಂತ

ಈ ಜಗತ್ತಿನಲ್ಲಿ ಪ್ರತಿಯೊಬ್ಬ ಜೀವನು ವಾಸ್ತವವಾಗಿ ನಿತ್ಯಶುದ್ಧ ಸಚ್ಚಿದಾನಂದರೂಪವಾದ ಪರಬ್ರಹ್ಮಸ್ವರೂಪಿಯಾಗಿದ್ದಾನೆ. ಅದನ್ನು ಚೆನ್ನಾಗಿ ತಿಳಿದುಕೊಂಡವನು ಸಂಸಾರದುಃಖಗಳಿಂದ ಮುಕ್ತನಾಗುತ್ತಾನೆ. ಸಂಸಾರವೆಂಬುದು ತ್ರಿಗುಣಾತ್ಮಕವಾದ ಅವಿದ್ಯೆಯ ವಿಕಾರವಾಗಿದೆ. ಈ ಪ್ರಪಂಚವು ಅವಿದ್ಯೆಯು ಇರುವವರೆಗೆ ಇರುತ್ತದೆ. ಬ್ರಹ್ಮಜ್ಞಾನವು ಬಂದನಂತರ ಅವಿದ್ಯೆಯು ನಾಶವಾಗುತ್ತದೆ. ಈ ಅವಿದ್ಯೆಯು ಮಾಯಾ, ಅಜ್ಞಾನ, ಪ್ರಕೃತಿ ಮುಂತಾದ ಶಬ್ದಗಳಿಂದಲೂ ಹೇಳಲ್ಪಡುತ್ತದೆ. ನಿರಂತರ ನಿಷ್ಕಾಮವಾದ ದೇವರ ಆರಾಧನೆ ಮತ್ತು ಸ್ವಧರ್ಮಾಚರಣೆಯಿಂದ ಚಿತ್ತಶುದ್ಧಿಯನ್ನು ಹೊಂದಿದ ನಂತರ ಜೀವನು ಬ್ರಹ್ಮವಿಚಾರ ಮಾಡಲು ಯೋಗ್ಯತೆಯನ್ನು ಹೊಂದುತ್ತಾನೆ. ತದಂತರ ಗುರುಮುಖತಃ ಶ್ರವಣ ಮನನ ನಿದಿಧ್ಯಾಸನಗಳನ್ನು ಮಾಡಿ ಅದ್ವೈತತತ್ತ್ವವನ್ನು ತಿಳಿದು ಅಜ್ಞಾನ ಪ್ರಯುಕ್ತವಾದ ಸಂಸಾರದಿಂದ ಮುಕ್ತಿಯನ್ನು ಹೊಂದುತ್ತಾನೆ.

## ಜಗದ್ಗುರು ಶ್ರೀಶಂಕರಾಚಾರ್ಯರು ತೋರಿಸಿದ ಪವಾಡಗಳು

1. ಮಹಾಲಕ್ಷ್ಮಿಯನ್ನು ಸ್ತುತಿಸಿ ಬಡ ಗೃಹಿಣಿಯ ಮನೆಯಲ್ಲಿ ಚಿನ್ನದ ಮಳೆಯನ್ನು ಸುರಿಸಿದರು.

2. ವಯಸ್ಸಾದ ತಮ್ಮ ತಾಯಿಯ ಸೌಕರ್ಯಕ್ಕಾಗಿ ಪೂರ್ಣಾನದಿಯ ಪಾತ್ರವನ್ನೇ ಬದಲಾಯಿಸಿ ತಮ್ಮ ಮನೆಯ ಮುಂದೆಯೇ ಪ್ರವಹಿಸುವಂತೆ ಮಾಡಿದರು.

3. ಮಳೆಗಾಲದಲ್ಲಿ ನರ್ಮದಾನದಿಯು ಉಕ್ಕಿ ಹರಿದು ಎಲ್ಲ ಊರುಗಳು ಕೊಚ್ಚಿಹೋಗುತ್ತಾ ಇರುವಾಗ ಇಡೀ ಪ್ರವಾಹದ ನೀರನ್ನು ತಮ್ಮ ಕಮಂಡಲುವಿನಲ್ಲಿ ಅಡಗಿಸಿದರು.

4. ಬದರಿನಾಥಕ್ಷೇತ್ರದಲ್ಲಿ ದುಷ್ಕರ್ಮಿಗಳು ದೇವರ ವಿಗ್ರಹವನ್ನು ನಾರದ ತೀರ್ಥದಲ್ಲಿ ಬಿಸಾಡಿದಾಗ ಅದರಲ್ಲಿಳಿದು ವಿಗ್ರಹವನ್ನು ಹುಡಿಕಿ ತಂದು ಪುನಃ ಪ್ರತಿಷ್ಠಾಪನೆ ಮಾಡಿದರು.

5. ತಿರುಪತಿಯ ತಿಮ್ಮಪ್ಪನ ಸನ್ನಿಧಿಯಲ್ಲಿ ಧನಾಕರ್ಷಣ ಯಂತ್ರವನ್ನು ಸ್ಥಾಪನೆ ಮಾಡಿದರು.

6. ಶೃಂಗೇರಿ ಕ್ಷೇತ್ರದಲ್ಲಿ ಗಿರಿಯೆಂಬ ವಿದ್ಯಾರ್ಥಿಗೆ ತಮ್ಮ ಮನಸ್ಸಂಕಲ್ಪದಿಂದಲೇ ಎಲ್ಲ ವಿದ್ಯೆಗಳನ್ನು ಅನುಗ್ರಹಿಸಿದರು.

7. ತಮ್ಮ ತಾಯಿಯವರಿಗೆ ಅಂತ್ಯಕಾಲದಲ್ಲಿ ಮುಕ್ತಿಯನ್ನು ಕರುಣಿಸಿದರು.

8. ಬದರೀನಾಥಕ್ಷೇತ್ರದಲ್ಲಿ ಚಳಿಯಿಂದ ನರಳುತ್ತಿರುವ ಜನರಿಗಾಗಿ ಬಿಸಿನೀರಿನ ಕುಂಡವನ್ನು ಸೃಷ್ಟಿಸಿದರು.

9. ಜಗನ್ನಾಥ ಕ್ಷೇತ್ರವಾದ ಪುರಿಯಲ್ಲಿ ವಿಧರ್ಮಿಯರ ಆಕ್ರಮಣದಿಂದ ದೇವತಾ ಮೂರ್ತಿಗಳ ನಾಶವನ್ನು ತಡೆಯಲು ಭೂಮಿಯೊಳಗೆ ಇಡಲ್ಪಟ್ಟ ವಿಗ್ರಹಗಳು ಶಿಥಿಲವಾಗಿರುವುದನ್ನು ಕಂಡು ನೂತನ ವಿಗ್ರಹಗಳನ್ನು ಪುನಃ ಪ್ರತಿಷ್ಠಾಪನೆ ಮಾಡಿ, ನೇಪಾಳದಿಂದ ಸಾಲಗ್ರಮಗಳನ್ನು ತರಿಸಿ ಪೂಜಾವಿಧಾನಗಳನ್ನು ಏರ್ಪಡಿಸಿದರು.

10. ಮೃತನಾದ ಬಾಲಕನನ್ನು ಬದುಕಿಸಿದರು.

## ಜಗದ್ಗುರು ಶ್ರೀಶಂಕರಾಚಾರ್ಯರು ಮಾಡಿದ ಲೋಕೋದ್ಧಾರ ಕಾರ್ಯಗಳು

1. ಸಮಾಜದ ಶ್ರೇಯಸ್ಸಿಗೋಸ್ಕರ 8ನೆಯ ವಯಸ್ಸಿನಲ್ಲಿಯೇ ಎಲ್ಲವುದನ್ನು ತ್ಯಜಿಸಿ ಮನೆಯಿಂದ ಹೊರಟು ಸಂನ್ಯಾಸಸ್ವೀಕಾರ ಮಾಡಿದರು.

2. ಅಸಾಧಾರಣವಾದ ಮಹಿಮೆಯನ್ನು ತಿಳಿದಿದ್ದ ಕೇರಳರಾಜನು ಸಮರ್ಪಿಸಿದ ಸುವರ್ಣ, ರತ್ನ, ಮಣಿಗಳನ್ನು ಮಹಾರಾಜನ ಕೈಯಲ್ಲಿಯೇ ಬಡಜನರಿಗೆ ದಾನ ಮಾಡಿಸಿದರು.

3. ಯಾವುದೇ ವಾಹನಸೌಕರ್ಯ ಮತ್ತು ರಸ್ತೆಗಳೂ ಇಲ್ಲದ ಕಾಲದಲ್ಲಿಯೂ ಮೂರು ಬಾರಿ ಸಂಪೂರ್ಣ ಭಾರತದಲ್ಲಿ ಸಂಚಾರ ಮಾಡಿ ಜನರೆಲ್ಲರಿಗೂ ಸನ್ಮಾರ್ಗದ ಉಪದೇಶಗಳನ್ನು ಮಾಡಿದರು.

4. ಶಿವ, ವಿಷ್ಣು, ದೇವಿ, ಗಣಪತಿ ಮುಂತಾದ ಅನೇಕ ರೂಪಗಳನ್ನು ಅನೇಕ ಹೆಸರುಗಳನ್ನು ಧರಿಸಿದ ಭಗವಂತ ಒಬ್ಬನೇ ಎಂಬ ಸತ್ಯವನ್ನು ತಿಳಿಸುವುದರ ಮೂಲಕ ತಾರತಮ್ಯಬುದ್ಧಿಯನ್ನು ಹೋಗಲಾಡಿಸಿ ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಸಂಘರ್ಷಗಳನ್ನು ತಡೆದರು.

5. ಅನೇಕ ಕ್ಷೇತ್ರಗಳಲ್ಲಿ ಪ್ರಾಣಿಬಲಿ ಮೊದಲಾದ ತಾಮಸಿಕ ಮತ್ತು ಹಿಂಸಾತ್ಮಕವಾದ ದುರಾಚಾರಗಳನ್ನು ಹಾಗೂ ಮೂಢನಂಬಿಕೆಗಳನ್ನು ನಿರ್ಮೂಲನೆ ಮಾಡಿ ಸಾತ್ತ್ವಿಕವಾದ ಪೂಜಾಪದ್ಧತಿಗಳನ್ನು ಪ್ರಾರಂಭಿಸಿದರು.

6. ಎಲ್ಲ ಭಾರತೀಯರಲ್ಲೂ ಐಕಮತ್ಯವನ್ನುಂಟು ಮಾಡಿ ಸನಾತನಧರ್ಮದ ನಿರಂತರಪ್ರಚಾರಕ್ಕಾಗಿ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು

ಆಮ್ನಾಯಪೀಠಗಳನ್ನು ಸ್ಥಾಪನೆ ಮಾಡಿ ಅಲ್ಲಿ ಗುರುಪರಂಪರೆಗಳನ್ನೇರ್ಪಡಿಸಿದರು. ಒಂದೊಂದು ಪೀಠದ ನಡುವೆ ಇರುವ ದೂರ ಸುಮಾರು 1800 ಕಿಲೋಮೀಟರುಗಳು.

7. ಯಾವುದೇ ರಕ್ತಪಾತವಿಲ್ಲದೇ ಕೇವಲ ತಮ್ಮ ಉಪದೇಶಗಳ ಮೂಲಕವಾಗಿಯೇ ಜನರ ಮನಸ್ಸಿನಲ್ಲಿ ಪರಿವರ್ತನೆಯನ್ನು ಉಂಟುಮಾಡಿ ಉತ್ತಮ ಸಮಾಜವನ್ನು ನಿರ್ಮಿಸಿದರು.

8. ಜಾತಿ, ಕುಲ, ಲಿಂಗ ಭೇದಗಳಿಲ್ಲದೇ ಪ್ರತಿಯೊಬ್ಬರು ಶಾಸ್ತ್ರಗಳಲ್ಲಿ ಅವರವರಿಗೆ ಹೇಳಿದ ಮಾರ್ಗಾನುಸಾರ ಭಗವಂತನ ಅನುಗ್ರಹಕ್ಕೆ ಪಾತ್ರರಾಗಲು ಯೋಗ್ಯರು ಎಂಬ ವಿಷಯವನ್ನು ತಿಳಿಸಿದರು.

9. ಜ್ಞಾನಿಯಾದವನು ಯಾರೇ ಆದರೂ ಅವನನ್ನು ಗೌರವಿಸಬೇಕೆಂದು ಹೇಳಿದರು.

10. ಪರೋಪಕಾರಕ್ಕಾಗಿ ತಮ್ಮ ತಲೆಯನ್ನೂ ಸಹ ನೀಡಲು ಸಿದ್ಧರಾದರು.[1]

11. ತಮ್ಮ ತಾಯಿಯಾದ ಆರ್ಯಾಂಬೆಯ ಅಂತ್ಯಕ್ರಿಯೆಗಳನ್ನು ತಾವೇ ಮಾಡಿ ಮಾತೃಭಕ್ತಿಯನ್ನು ಮೆರೆದರು.

12. ಇಡೀ ಪ್ರಪಂಚಕ್ಕೆ ಭಾರತೀಯ ತತ್ತ್ವಜ್ಞಾನದ ಬೆಳಕನ್ನು ನೀಡಿ ಇದರ ಮಹತ್ತ್ವವನ್ನು ತಿಳಿಸಿದರು.

13. ಪ್ರಸ್ಥಾನತ್ರಯ ಭಾಷ್ಯಗಳು ಪ್ರಕರಣಗ್ರಂಥಗಳು ಸ್ತೋತ್ರಗಳು ಹೀಗೆ ನೂರಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದರು.

14. ಜೀವಿಯ ನಿಜಸ್ವರೂಪವು ಸಚ್ಚಿದಾನಂದ ಸ್ವರೂಪವಾದ ಪರಮಾತ್ಮಸ್ವರೂಪವೆಂಬ ಸತ್ಯವನ್ನು ತಿಳಿಸಿದರು.

## ಜಗದ್ಗುರು ಶ್ರೀಶಂಕರಾಚಾರ್ಯರ ಕೆಲವು ಉಪದೇಶಗಳು

1. ಎಲ್ಲರನ್ನು ನಿನ್ನಂತೆ ನೋಡು, ಯಾರಿಗೂ ತೊಂದರೆ ಮಾಡಬೇಡ.

2. ತಿಳಿದೂ ತಪ್ಪು ಮಾಡುವವನೇ ನಿಜವಾದ ಕುರುಡ.

3. ಕೆಟ್ಟ ಕೆಲಸಗಳನ್ನು ಮಾಡದಂತೆ ನಮ್ಮನ್ನು ತಡೆಯುವವನೇ ನಮ್ಮ ನಿಜವಾದ ಗೆಳೆಯ.

4. ಮಾತನಾಡಬೇಕಾದ ಸಮಯದಲ್ಲಿ ಮೌನವಾಗಿರುವವನೇ ನಿಜವಾದ ಮೂಕ.

---

1. ವಿವರಣೆಗೆ 20ನೇ ಚಿತ್ರವನ್ನು ನೋಡಿ.

5. ಒಳ್ಳೆಯ ಮಾತುಗಳ ಮೂಲಕ ದಾನ ಮಾಡುವುದು, ಸಾಮರ್ಥ್ಯವಿದ್ದರೂ ಕ್ಷಮಿಸುವುದು, ಪರೋಪಕಾರಕ್ಕೋಸ್ಕರವೇ ಸಂಪಾದನೆ ಮಾಡುವುದು ಎಂಬ ಈ ಮೂರು ವಿಷಯಗಳನ್ನು ಅಳವಡಿಸಿಕೊಳ್ಳಬೇಕು.
6. ಅನುಭವಸ್ಥರನ್ನು ಅನುಸರಣೆ ಮಾಡುತ್ತಾ ಜೀವನ ಮಾಡುವವನು ಜೀವನದಲ್ಲಿ ಕಷ್ಟಗಳನ್ನು ಅನುಭವಿಸಬೇಕಾಗಿಲ್ಲ.
7. ಯಾವಾಗಲೂ ಉತ್ಸಾಹದಿಂದ ತನ್ನ ಕರ್ತವ್ಯಗಳನ್ನು ನಿರ್ವಹಿಸುವವನಿಗೆ ಸಂಪತ್ತು ಸಮೃದ್ಧಿಯಾಗಿ ದೊರೆಯುತ್ತದೆ.
8. ಹೃದಯದಲ್ಲಿರುವ ಮಾಲಿನ್ಯವನ್ನು ಹೋಗಲಾಡಿಸುವುದೇ ನಿಜವಾದ ತೀರ್ಥ.
9. ಜಿಪುಣತನ ಒಳ್ಳೆಯ ಹೆಸರನ್ನು ಕೆಡಿಸುತ್ತದೆ.
10. ಬಯಕೆಗಳನ್ನು ಗೆದ್ದವನು ಯಾರಿಗೂ ಹೆದರಬೇಕಾಗಿಲ್ಲ.
11. ವಿನಯಶಾಲಿ ಮನುಷ್ಯನು ಸದಾ ಏಳಿಗೆಯನ್ನು ಹೊಂದುತ್ತಾನೆ.
12. ಕೃಷಿ ಮಾಡುವವನು ಫಲ ಹೊಂದುತ್ತಾನೆ.
13. ಕಷ್ಟಗಳಲ್ಲಿರುವವರನ್ನು ಕಾಪಾಡುವವನೇ ನಿಜವಾದ ಶೂರ.
14. ಸಿಟ್ಟನ್ನು ಗೆದ್ದವನು ಪಶ್ಚಾತ್ತಾಪ ಪಡುವ ಆವಶ್ಯಕತೆಯಿಲ್ಲ.
15. ತಂದೆತಾಯಿಗಳೇ ಪ್ರತ್ಯಕ್ಷದೇವರು.
16. ಮಹಾತ್ಮರಿಗೆ ದ್ರೋಹ ಮಾಡಿದವನು ಸಮೂಲವಾಗಿ ನಾಶವಾಗುತ್ತಾನೆ.
17. ದುಷ್ಟರ ಜತೆಗೆ ಮೈತ್ರಿ ಎಷ್ಟು ಬೇಗ ಉಂಟಾಗುತ್ತದೋ ಅಷ್ಟೇ ಬೇಗ ನಾಶವಾಗುತ್ತದೆ.
18. ಪ್ರತಿಫಲ ಬಯಸದೇ ನೀಡುವುದು ನಿಜವಾದ ದಾನ.
19. ರಕ್ತಮಾಂಸಮಯವಾದ ಹೆಣ್ಣಿನ ಶರೀರವನ್ನು ನೋಡಿ ಮೋಹಪಡಬೇಡ.
20. ಒಳ್ಳೆಯ ಶಿಷ್ಯನಿಗೆ ಕಲಿಸಿದ ವಿದ್ಯೆಯು ಕಲ್ಪವೃಕ್ಷದಂತೆ.
21. ಜ್ಞಾನವೃದ್ಧರಿಲ್ಲದ ಸಭೆಯು ತ್ಯಾಜ್ಯ.
22. ಸೋಮಾರಿಯಾದ ಮನುಷ್ಯನು ತನಗೆ ತಾನೇ ಶತ್ರುವು.
23. ದುರಾಸೆಪಡುವವನೇ ನಿಜವಾದ ಕುರುಡ.
24. ಇನ್ನೊಬ್ಬರ ಮುಂದೆ ಕೈ ಚಾಚದೇ ಬದುಕುವುದೇ ಉತ್ತಮವಾದ ಜೀವನ.

25. ತೃಪ್ತಿಯಿಲ್ಲದ ಮನುಷ್ಯನು ಸದಾ ದುಃಖಿಯಾಗುತ್ತಾನೆ.

26. ಇನ್ನೊಬ್ಬರ ಹಿತವನ್ನು ಬಯಸುವವರಿಗೆ ಎಲ್ಲರ ಆದರಣೆ ಸಿಗುತ್ತದೆ.

27. ಧರ್ಮವನ್ನು ರಕ್ಷಿಸುವುದಕ್ಕೆ ಒಂದು ಸುಳ್ಳು ಹೇಳಿದರೂ ತಪ್ಪಿಲ್ಲ.

28. ನಿಜವಾದ ವಿಷವು ಹಾವುಗಳಲ್ಲಿಲ್ಲ, ದುಷ್ಟರಲ್ಲಿ ಇದೆ.

29. ಯಾರಿಗೂ ತೊಂದರೆ ಮಾಡದವನೇ ಭಗವಂತನ ಪ್ರೀತಿಗೆ ಪಾತ್ರನಾಗುತ್ತಾನೆ.

30. ಗೃಹಸ್ಥನಿಗೆ ಹೆಂಡತಿಯೇ ನಿಜವಾದ ಗೆಳೆಯ.

31. ತನ್ನ ಕರ್ತವ್ಯವನ್ನು ಮರೆತವನು ಸತ್ತವನಿಗೆ ಸಮಾನ.

32. ಒಳ್ಳೆಯವರಿಗೆ ಹಿಂಸೆ ಮಾಡುವವನು ಸಂಪೂರ್ಣವಾಗಿ ನಾಶವಾಗುತ್ತಾನೆ.

33. ನೀಚರನ್ನು ಆಶ್ರಯಿಸುವವನು ನಾಯಿಗಿಂತಲೂ ಕಡೆ.

34. ಸರಿಯಾದ ಸಮಯದಲ್ಲಿ ನೀಡಲ್ಪಟ್ಟ ವಸ್ತುವು ಯಾವುದಾದರೂ ಅಮೂಲ್ಯವೇ.

35. ಶುದ್ಧವಾದ ಮನಸ್ಸುಳ್ಳವನೇ ಪರಿಶುದ್ಧನಾದವನು.

36. ಯಾವುದೇ ವೃಕ್ಷವು ಬೆಳೆಯಬೇಕೆಂದರೆ ನೀರು ಬೇಕು. ಆದರೇ ನಮಗೆ ಯಾವ ವೃಕ್ಷವು ಬೇಕೋ ಆ ಬೀಜವನ್ನು ನೆಡುವುದು ನಮ್ಮ ಕೆಲಸ. ನಾವು ನೆಟ್ಟ ಬೀಜದಿಂದ ಅಂಕುರವು ಹುಟ್ಟಿ ಅದು ದೊಡ್ಡ ವೃಕ್ಷವಾಗಿ ಬೆಳೆಯುವುದಕ್ಕೆ ನೀರು ಕಾರಣವಾಗುತ್ತದೆ. ನಾವು ವಿಚಾರಿಸದೇ ತಪ್ಪಾದ ಬೀಜವನ್ನು ನೆಟ್ಟು ನೀರನ್ನು ನಿಂದನೆ ಮಾಡುವ ಹಾಗಿಲ್ಲ. ಹಾಗೆಯೇ ನಾವು ಮಾಡುವ ಕೆಲಸಕ್ಕೆ ತಕ್ಕ ಫಲವನ್ನು ಕೊಡುವವನು ಭಗವಂತ, ನಾವು ತಪ್ಪು ಕೆಲಸ ಮಾಡಿ ಭಗವಂತನನ್ನು ನಿಂದಿಸುವ ಹಾಗಿಲ್ಲ.

37. ಯಾವುದೇ ಕೆಲಸವನ್ನು ವಿಚಾರಿಸದೇ ಮಾಡಬಾರದು. ವಿಚಾರಿಸಿ ಮಾಡಬೇಕು. ಹಾಗಂತ ಕುತರ್ಕಗಳನ್ನು ಮಾಡುತ್ತಾ ಇರಬಾರದು.

38. ಆಯಾ ಕೆಲಸಗಳನ್ನು ಸರಿಯಾದ ಸಮಯಕ್ಕೆ ಮಾಡಬೇಕು.

39. ತಾನು ಜ್ಞಾನಿಯಾಗಿ ಶಿಷ್ಯರನ್ನು ಜ್ಞಾನಿಗಳನ್ನಾಗಿ ಮಾಡುವವನೇ ನಿಜವಾದ ಗುರುವು. ಜ್ಞಾನದಿಂದಲೇ ಗುರುವನ್ನು ಗುರುತಿಸಬೇಕು.

40. ನನ್ನಲ್ಲಿರುವ ಅಹಂಕಾರವನ್ನು ನೀಗಿಸು, ನನ್ನ ಮನಸ್ಸನ್ನು ಹತೋಟಿಯಲ್ಲಿಡು, ದುರಾಸೆಗಳನ್ನು ನೀಗಿಸು, ದಯಾಗುಣವನ್ನು ಬೆಳೆಸು

ಸಂಸಾರಸಾಗರದಿಂದ ದಾಟಿಸು ಎಂದು ದೇವರನ್ನು ಪ್ರಾರ್ಥಿಸಬೇಕು. ಇಷ್ಟು ಕೇಳಿದರೇ ಎಲ್ಲವುದನ್ನೂ ಕೇಳಿದಂತೆಯೇ ಆಗುತ್ತದೆ.

41. ವಿದ್ಯಾಭ್ಯಾಸ, ಔಷಧ ಮತ್ತು ಸತ್ಪಾತ್ರದಾನ ಈ ಮೂರರ ವಿಷಯದಲ್ಲೂ ಯಾವಾಗಲೂ ಮನುಷ್ಯರು ಪ್ರಯತ್ನಶೀಲರಾಗಿರಬೇಕು.

42. ಪರಬ್ರಹ್ಮತತ್ತ್ವವನ್ನು ತಿಳಿದುಕೊಂಡರೇ ಮಾತ್ರ ಸಂಸಾರದಿಂದ ಹೊರಗೆ ಬರಲು ಸಾಧ್ಯ.

43. ಮೃತ್ಯುವೆಂಬುದು ಎಲ್ಲರಿಗೂ ಅನಿವಾರ್ಯ.

44. ಪ್ರಪಂಚದಲ್ಲಿ ಯಾವ ಮೂಲೆಗೆ ಹೋದರೂ ಕಷ್ಟಗಳಿದ್ದೇ ಇರುತ್ತವೆ ಎಂಬ ಸತ್ಯವನ್ನು ತಿಳಿದುಕೋ.

45. ಅಮೂಲ್ಯವಾದ ಸಮಯವನ್ನು ವ್ಯರ್ಥಮಾಡಬೇಡ.

46. ವ್ಯರ್ಥವಾದ ಮಾತುಗಳನ್ನಾಡಬೇಡ.

47. ಪ್ರತಿದಿನ ಭಗವದ್ಗೀತೆಯನ್ನು ಪಠನ ಮಾಡು.

48. ಭಗವಂತನ ಸ್ಮರಣೆ ಮಾಡು.

49. ಸತ್ಪುರುಷರ ಸಹವಾಸ ಮಾಡು.

50. ಕಷ್ಟದಲ್ಲಿರುವವರಿಗೆ ಸಹಾಯ ಮಾಡು.

51. ನ್ಯಾಯವಾಗಿ ನಿನಗೆ ಸಿಗಬೇಕಾದ ಫಲದಿಂದ ಸಂತುಷ್ಟನಾಗು. ಅನ್ಯಾಯವಾದ ಫಲಕ್ಕೆ ಆಸೆಪಡಬೇಡ.

52. ಕಾಮಕ್ರೋಧಾದಿ ದುರ್ಗುಣಗಳನ್ನು ಬಿಡು.

53. ಗೋವನ್ನು ತಾಯಿಯಂತೆ ಭಾವಿಸಿ ಪೂಜಿಸು.

54. ನಿಮ್ಮ ಅಹಂಕಾರವನ್ನು ತೊಡೆದುಹಾಕಲು, ಸಂಯಮವನ್ನು ತರಲು, ನಿಮ್ಮ ದುರಾಸೆಯನ್ನು ಕಡಿಮೆ ಮಾಡಲು, ನಿಮ್ಮ ಜೀವನ ಪ್ರೀತಿಯನ್ನು ಹೆಚ್ಚಿಸಲು, ಸಂಸಾರಸಾಗರದಿಂದ ದಾಟಲು ದೇವರನ್ನು ಕೇಳಿಕೊಳ್ಳಿ. ಇದನ್ನು ಕೇಳಿದರೆ ಉಳಿದೆಲ್ಲವನ್ನೂ ಕೇಳಿದಂತೆ.

55. ನಿಜವಾದ ತತ್ತ್ವಜ್ಞಾನವನ್ನು ತಿಳಿದುಕೊಂಡರೆ ಮಾತ್ರ ಸಂಸಾರ ಸಾಗರದಿಂದ ಹೊರಬರಲು ಸಾಧ್ಯ.

56. ಋಷಿ ಮುನಿಗಳು ಮತ್ತು ಗುರುಹಿರಿಯರು ಏರ್ಪಡಿಸಿದ ಸತ್ಸಂಪ್ರದಾಯ

ವನ್ನು ಬಿಟ್ಟು ಇಷ್ಟಬಂದ ಹಾಗೆ ವರ್ತಿಸುವವನು ಎಷ್ಟು ದೊಡ್ಡ ವ್ಯಕ್ತಿಯಾಗಿದ್ದರೂ ಅವನಿಗೆ ಬೆಲೆಕೊಡಬಾರದು.

57. ಬೆಂಕಿಯು ತನ್ನ ಹತ್ತಿರಕ್ಕೆ ಬಂದವರಿಗೆ ಯಾವ ಭೇದದೃಷ್ಟಿಯಿಲ್ಲದೇ ಚಳಿಯನ್ನು ಹೋಗಲಾಡಿಸಿ ಹಿತವನ್ನುಂಟುಮಾಡಿದಂತೆ ಭಗವಂತನು ತನ್ನನ್ನು ಆಶ್ರಯಿಸಿದವರಲ್ಲಿ ಭೇದವನ್ನೆಣಿಸದೇ ಅನುಗ್ರಹ ಮಾಡುತ್ತಾನೆ.

58. ಗುರುವಿನ ಪಾದದಲ್ಲಿ ಅಚಂಚಲವಾದ ಶ್ರದ್ಧಾಭಕ್ತಿಗಳನ್ನು ಹೊಂದಿ ಸಂಸಾರಸಾಗರದಿಂದ ಮುಕ್ತನಾಗು.

# ಶ್ರೀ ಜಗದ್ಗುರು ಶಂಕರಾಚಾರ್ಯರ ಕೃತಿಗಳು

**❋ ಭಾಷ್ಯ ಗ್ರಂಥಗಳು:**

1. ಬ್ರಹ್ಮಸೂತ್ರ ಭಾಷ್ಯ
2. ಉಪನಿಷದ್ಭಾಷ್ಯ
3. ಗೀತಾಭಾಷ್ಯ

**❋ ಲಘುಭಾಷ್ಯಗಳು**

1. ವಿಷ್ಣುಸಹಸ್ರನಾಮಭಾಷ್ಯ
2. ಲಲಿತಾತ್ರಿಶತಿಭಾಷ್ಯ
3. ಸನತ್ಸುಜಾತೀಯಭಾಷ್ಯ
4. ಹಸ್ತಾಮಲಕೀಯಭಾಷ್ಯ

**❋ ಪ್ರಕರಣ ಗ್ರಂಥಗಳು:**

1. ಪ್ರಬೋಧಸುಧಾಕರ
2. ಸ್ವಾತ್ಮಪ್ರಕಾಶಿಕಾ
3. ಅದ್ವೈತಾನುಭೂತಿ
4. ಪ್ರಶ್ನೋತ್ತರ ರತ್ನಮಾಲಿಕಾ
5. ಯೋಗತಾರಾವಳಿ
6. ಜೀವನ್ಮುಕ್ತಾನಂದಲಹರಿ
7. ಪಂಚೀಕರಣ
8. ಬ್ರಹ್ಮಜ್ಞಾನಾವಲಿಮಾಲಾ
9. ನಿರ್ವಾಣಮಂಜರಿ
10. ಸ್ವಾತ್ಮನಿರೂಪಣ
11. ಶತಶ್ಲೋಕೀ
12. ಉಪದೇಶಸಾಹಸ್ರಿ
13. ಸರ್ವ ವೇದಾಂತ ಸಾರ ಸಂಗ್ರಹ
14. ಲಘುವಾಕ್ಯವೃತ್ತಿ
15. ಅಪರೋಕ್ಷಾನುಭೂತಿ
16. ವಾಕ್ಯವೃತ್ತಿ
17. ಆತ್ಮಬೋಧ
18. ವಿವೇಕಚೂಡಾಮಣಿ
19. ದಶಶ್ಲೋಕೀ
20. ಏಕಶ್ಲೋಕೀ
21. ಮಾಯಾಪಂಚಕ
22. ಮನೀಷಾಪಂಚಕ
23. ಅದ್ವೈತಪಂಚರತ್ನ
24. ನಿರ್ವಾಣಾಷ್ಟಕ
25. ಉಪದೇಶಪಂಚಕ
26. ಧನ್ಯಾಷ್ಟಕ
27. ಅನಾತ್ಮಶ್ರೀವಿಗರ್ಹಣ
28. ಯತಿಪಂಚಕ
29. ಬ್ರಹ್ಮಾನುಚಿಂತನ
30. ಸದಾಚಾರಾನುಸಂಧಾನ
31. ಸ್ವರೂಪಾನುಸಂಧಾನ
32. ತತ್ತ್ವೋಪದೇಶ

❁ **ಸ್ತೋತ್ರಗಳು:**

1. ಗಣೇಶಪಂಚರತ್ನ
2. ಗಣೇಶಭುಜಂಗ
3. ಮೀನಾಕ್ಷಿ ಪಂಚರತ್ನ
4. ತ್ರಿಪುರಸುಂದರ್ಯಷ್ಟಕ
5. ಮೀನಾಕ್ಷಿಸ್ತೋತ್ರ
6. ಭ್ರಮರಾಂಬಾಷ್ಟಕ
7. ನವರತ್ನಮಾಲಿಕಾ
8. ಗೌರೀದಶಕ
9. ಅನ್ನಪೂರ್ಣಾಷ್ಟಕ
10. ಕಲ್ಯಾಣವೃಷ್ಟಿಸ್ತವ
11. ಮಂತ್ರಮಾತೃಕಾಪುಷ್ಪಮಾಲಾಸ್ತವ
12. ಭವಾನೀಭುಜಂಗ
13. ಕನಕಧಾರಾಸ್ತೋತ್ರ
14. ಆನಂದಲಹರಿ
15. ದೇವೀಭುಜಂಗ
16. ದೇವೀಚತುಃಷಷ್ಟ್ಯುಪಚಾರ ಪೂಜಾ ಸ್ತೋತ್ರ
17. ತ್ರಿಪುರಸುಂದರೀವೇದಪಾದಸ್ತೋತ್ರ
18. ತ್ರಿಪುರಸುಂದರೀಮಾನಸ ಪೂಜಾ ಸ್ತೋತ್ರ
19. ದಶಶ್ಲೋಕೀಸ್ತುತಿ
20. ದಕ್ಷಿಣಾಮೂರ್ತ್ಯಷ್ಟಕ
21. ವೇದಸಾರಶಿವಸ್ತೋತ್ರ
22. ದಕ್ಷಿಣಾಮೂರ್ತಿ ವರ್ಣಮಾಲಾ ಸ್ತೋತ್ರ
23. ಶಿವಪಂಚಾಕ್ಷರ ನಕ್ಷತ್ರಮಾಲಾ ಸ್ತೋತ್ರ
24. ಶಿವಕೇಶಾದಿಪಾದಾಂತವರ್ಣ ಸ್ತೋತ್ರ
25. ಶಿವಭುಜಂಗ
26. ಶಿವಪಾದಾದಿಕೇಶಾಂತವರ್ಣ ಸ್ತೋತ್ರ
27. ದ್ವಾದಶಲಿಂಗ ಸ್ತೋತ್ರ
28. ಮೃತ್ಯುಂಜಯಮಾನಸಿಕಪೂಜಾ
29. ಸುವರ್ಣಮಾಲಾಸ್ತುತಿ
30. ಲಕ್ಷ್ಮೀನೃಸಿಂಹಪಂಚರತ್ನ
31. ಪಾಂಡುರಂಗಾಷ್ಟಕ
32. ಅಚ್ಯುತಾಷ್ಟಕ
33. ಗೋವಿಂದಾಷ್ಟಕ
34. ವಿಷ್ಣುಭುಜಂಗ ಪ್ರಯಾತ ಸ್ತೋತ್ರ
35. ಹರಿಸ್ತುತಿ
36. ವಿಷ್ಣುಪಾದಾದಿಕೇಶಾಂತ ಸ್ತೋತ್ರ
37. ಸುಬ್ರಹ್ಮಣ್ಯಭುಜಂಗ
38. ಕಾಶೀಪಂಚಕ
39. ಯಮುನಾಷ್ಟಕ
40. ನರ್ಮದಾಷ್ಟಕ
41. ಗಂಗಾಷ್ಟಕ
42. ಮಣಿಕರ್ಣಿಕಾಷ್ಟಕ
43. ಗಣೇಶಪಂಚರತ್ನ
44. ಲಲಿತಾಪಂಚರತ್ನ
45. ಶಾರದಾಭುಜಂಗಪ್ರಯಾತಾಷ್ಟಕ
46. ಸೌಂದರ್ಯಲಹರಿ

47. ಶಿವಪಂಚಾಕ್ಷರ ಸ್ತೋತ್ರ
48. ಶಿವನಾಮಾವಲ್ಯಷ್ಟಕ
49. ಕಾಲಭೈರವಾಷ್ಟಕ
50. ಶಿವಾಪರಾಧಕ್ಷಮಾಪಣಾಸ್ತೋತ್ರ
51. ದಕ್ಷಿಣಾಮೂರ್ತಿಸ್ತೋತ್ರ
52. ಶಿವಾನಂದಲಹರಿ
53. ಅರ್ಧನಾರೀಶ್ವರಸ್ತೋತ್ರ
54. ಉಮಾಮಹೇಶ್ವರ ಸ್ತೋತ್ರ
55. ಷಟ್ಪದೀಸ್ತೋತ್ರ
56. ಜಗನ್ನಾಥಾಷ್ಟಕ
57. ಕೃಷ್ಣಾಷ್ಟಕ
58. ಲಕ್ಷ್ಮೀನೃಸಿಂಹಕರುಣಾರಸ ಸ್ತೋತ್ರ
59. ರಾಮಭುಜಂಗಪ್ರಯಾತ ಸ್ತೋತ್ರ
60. ಮೋಹಮುದ್ಗರ
61. ಹನುಮುತ್ಪಂಚರತ್ನ
62. ಗುರ್ವಾಷ್ಟಕ
63. ನಿರ್ಗುಣಮಾನಸಪೂಜಾ
64. ಪ್ರಾತಃಸ್ಮರಣ ಸ್ತೋತ್ರ
65. ಭಗವನ್ಮಾನಸಪೂಜಾ

# ಗುರುವಂದನ

**ಅವತೀರ್ಣಶ್ಚ ಕಾಲಟ್ಯಾಂ ಕೇದಾರೇಂತರ್ಹಿತಶ್ಚ ಯಃ ।**
**ಚತುಷ್ಪೀಠಪ್ರತಿಷ್ಠಾತಾ ಜಯತಾಚ್ಛಂಕರೋ ಗುರುಃ ॥**

ಕಾಲಟಿಯಲ್ಲಿ ಅವತರಿಸಿ ಕೇದಾರದಲ್ಲಿ ಅಂತರ್ಧಾನರಾದಂತಹ ನಾಲ್ಕು ಪೀಠಗಳ ಸಂಸ್ಥಾಪಕರಾದಂತಹ ಜಗದ್ಗುರು ಶ್ರೀಶಂಕರಾಚಾರ್ಯರಿಗೆ ಜಯವಾಗಲಿ.

**ಶಂಕಾರೂಪೇಣ ಮಚ್ಚಿತ್ತಂ ಪಂಕೀಕೃತಮಭೂದ್ಯಯಾ ।**
**ಕಿಂಕರೀ ಯಸ್ಯ ಸಾ ಮಾಯಾ ಶಂಕರಾಚಾರ್ಯಮಾಶ್ರಯೇ ॥**

ಯಾವ ಮಾಯೆಯು ಶಂಕೆಯ ರೂಪದಲ್ಲಿದ್ದು ನನ್ನ ಮನಸ್ಸನ್ನು ಕಲುಷಿತಗೊಳಿಸಿತೋ, ಆ ಮಾಯೆಯು ಯಾರಿಗೆ ವಶವಾಗಿದೆಯೋ ಅಂತಹ ಶ್ರೀ ಶಂಕರಾಚಾರ್ಯರನ್ನು ಆಶ್ರಯಿಸುತ್ತೇನೆ.

**ಅಜ್ಞಾನಾಂ ಜಾಹ್ನವೀತೀರ್ಥಂ ವಿದ್ಯಾತೀರ್ಥಂ ವಿವೇಕಿನಾಮ್ ।**
**ಸರ್ವೇಷಾಂ ಸುಖದಂ ತೀರ್ಥಂ ಭಾರತೀತೀರ್ಥಮಾಶ್ರಯೇ ॥**

ಅಜ್ಞಾನಿಗಳಿಗೆ ಗಂಗೆಯೇ ತೀರ್ಥ (ಪವಿತ್ರ), ವಿವೇಕಿಗಳಿಗೆ ವಿದ್ಯೆಯೇ ತೀರ್ಥ ಆದರೆ ಜ್ಞಾನಿ ಅಜ್ಞಾನಿಗಳೆಲ್ಲರಿಗೂ ಸುಖವನ್ನು ಕೊಡುವ (ಜನ್ಮ ಪಾವನಗೊಳಿಸುವವರು) ತೀರ್ಥರಾದ ಶ್ರೀಭಾರತೀತೀರ್ಥ ಮಹಾಸ್ವಾಮಿಗಳವರನ್ನು ಆಶ್ರಯಿಸುತ್ತೇನೆ.

**ವಿದ್ಯಾವಿನಯಸಂಪನ್ನಂ ವೀತರಾಗಂ ವಿವೇಕಿನಮ್ ।**
**ವಂದೇ ವೇದಾಂತತತ್ತ್ವಜ್ಞಂ ವಿಧುಶೇಖರಭಾರತೀಮ್ ॥**

ವಿದ್ಯೆ ಮತ್ತು ವಿನಯಗಳಿಂದ ಸಂಪನ್ನರೂ, ಆಸೆಯನ್ನು ದಾಟಿದವರೂ, ವಿವೇಕಿಗಳೂ, ವೇದಾಂತ ತತ್ತ್ವವನ್ನು ತಿಳಿದವರೂ ಆದ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳವರನ್ನು ವಂದಿಸುತ್ತೇನೆ.

# ಶೃಂಗೇರಿ ಜಗದ್ಗುರು ಬಿರುದಾವಳಿ

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ–
ಪದವಾಕ್ಯಪ್ರಮಾಣಪಾರಾವಾರಪಾರೀಣ–ಯಮನಿಯಮಾಸನ–
ಪ್ರಾಣಾಯಾಮಪ್ರತ್ಯಾಹಾರಧಾರಣಾಧ್ಯಾನಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ–
ತಪಶ್ಚಕ್ರವರ್ತಿ–ಅನಾದ್ಯವಿಚ್ಛಿನ್ನಶ್ರೀಶಂಕರಾಚಾರ್ಯಗುರುಪರಂಪರಾಪ್ರಾಪ್ತ–
ಷಡ್ದರ್ಶನಸ್ಥಾಪನಾಚಾರ್ಯ–ವ್ಯಾಖ್ಯಾನಸಿಂಹಾಸನಾಧೀಶ್ವರ–
ಸಕಲನಿಗಮಾಗಮಸಾರಹೃದಯ–
ಸಾಂಖ್ಯತ್ರಯಪ್ರತಿಪಾದಕ–ವೈದಿಕಮಾರ್ಗಪ್ರವರ್ತಕ–ಸರ್ವತಂತ್ರಸ್ವತಂತ್ರ–
ಆದಿರಾಜಧಾನೀ–ವಿದ್ಯಾನಗರಮಹಾರಾಜಧಾನೀ–
ಕರ್ಣಾಟಕಸಿಂಹಾಸನಪ್ರತಿಷ್ಠಾಪನಾಚಾರ್ಯ–ಶ್ರೀಮದ್ರಾಜಾಧಿರಾಜಗುರು–
ಭೂಮಂಡಲಾಚಾರ್ಯ–ಋಷ್ಯಶೃಂಗಪುರವರಾಧೀಶ್ವರ–ತುಂಗಭದ್ರಾತೀರವಾಸಿ–
ಶ್ರೀಮದ್ವಿದ್ಯಾಶಂಕರಪಾದಪದ್ಮಾರಾಧಕ–
ಶ್ರೀಮಜ್ಜಗದ್ಗುರು–ಶ್ರೀಮದಭಿನವವಿದ್ಯಾತೀರ್ಥಮಹಾಸ್ವಾಮಿಗುರುಕರಕಮಲಸಂಜಾತ–
ಶ್ರೀಮಜ್ಜಗದ್ಗುರು–ಶ್ರೀಭಾರತೀತೀರ್ಥಮಹಾಸ್ವಾಮಿನಾಂ ತತ್ಕರಕಮಲಸಂಜಾತ–
ಶ್ರೀಮಜ್ಜಗದ್ಗುರು–ಶ್ರೀವಿಧುಶೇಖರಭಾರತೀ–ಮಹಾಸ್ವಾಮಿನಾಂಚ
ಚರಣಾರವಿಂದಯೋಃ ಸಾಷ್ಟಾಂಗಪ್ರಣಾಮಾನ್ ಸಮರ್ಪಯಾಮಃ ॥

ಶ್ರೀಪರಮಹಂಸ ಸಂನ್ಯಾಸಿಗಳಾದ ಆಚಾರ್ಯಶ್ರೇಷ್ಠರು, ಪದಶಾಸ್ತ್ರ(ವ್ಯಾಕರಣ), ವಾಕ್ಯಶಾಸ್ತ್ರ(ಪೂರ್ವ ಮೀಮಾಂಸ), ಪ್ರಮಾಣಶಾಸ್ತ್ರ(ನ್ಯಾಯ)ಗಳಲ್ಲಿ ತಳಸ್ಪರ್ಶಿ ಜ್ಞಾನವುಳ್ಳವರು; ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಹಾಗೂ ಸಮಾಧಿಯೆಂಬ ಅಷ್ಟಾಂಗಯೋಗಗಳ ಅನುಷ್ಠಾನನಿರತರು; ತಪಸ್ಸಿನ ಚಕ್ರವರ್ತಿಗಳು; ಅನಾದಿ ಕಾಲದಿಂದಲೂ ಅಖಂಡವಾದ ಶ್ರೀಶಂಕರಾಚಾರ್ಯ ಗುರುಪರಂಪರೆಯಲ್ಲಿ ಬಂದವರು; ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸ, ಉತ್ತರಮೀಮಾಂಸಗಳೆಂಬ ಆರು ದರ್ಶನಗಳ ಸಮನ್ವಯವನ್ನು ಸ್ಥಾಪಿಸಿದ ಆಚಾರ್ಯರು ವ್ಯಾಖ್ಯಾನ ಸಿಂಹಾಸನದ ಸಾರ್ವಭೌಮರು; ಎಲ್ಲಾ ವೇದಗಳ ಹಾಗು ಶಾಸ್ತ್ರಗಳ ಸಾರವನ್ನು ಅರಿತಿರುವವರು; ಸಾಂಖ್ಯತ್ರಯದ (ಸಾಂಖ್ಯ, ಯೋಗ ಮತ್ತು ವೇದಾಂತಗಳ) ಪ್ರತಿಪಾದಕರು; ವೇದಗಳಲ್ಲಿ ತಿಳಿಸಿರುವ ಧರ್ಮಮಾರ್ಗವನ್ನು ಮುನ್ನಡೆಸುವವರು; ಎಲ್ಲಾ

ಸಿದ್ಧಾಂತಗಳಲ್ಲೂ ಸ್ವತಂತ್ರರು; ಆದಿ ರಾಜಧಾನಿಯಾದ ವಿದ್ಯಾನಗರ ಮಹಾರಾಜಧಾನಿಯ ಕರ್ಣಾಟಕ ಸಿಂಹಾಸನವನ್ನು ಪ್ರತಿಷ್ಠಾಪಿಸಿದ ಆಚಾರ್ಯರು; ರಾಜಮಹಾರಾಜರುಗಳ ಗುರುಗಳು; ಭೂಮಂಡಲದ ಆಚಾರ್ಯರು; ಋಷ್ಯಶೃಂಗಪುರದ ಸಾರ್ವಭೌಮರು; ತುಂಗಭದ್ರಾ ನದಿತೀರದ ನಿವಾಸಿಗಳು; ಶ್ರೀವಿದ್ಯಾಶಂಕರರ ಪಾದಪದ್ಮಗಳ ಆರಾಧಕರು; ಶ್ರೀಜಗದ್ಗುರು ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳ ಕರಕಮಲಗಳಿಂದ ಅನುಗೃಹೀತರಾದ ಶ್ರೀಜಗದ್ಗುರು ಶ್ರೀಭಾರತೀತೀರ್ಥ ಮಹಾಸ್ವಾಮಿಗಳು ಮತ್ತು ಶ್ರೀಭಾರತೀತೀರ್ಥ ಮಹಾಸ್ವಾಮಿಗಳ ಕರಕಮಲಗಳಿಂದ ಅನುಗೃಹೀತರಾದ ಶ್ರೀಜಗದ್ಗುರು ಶ್ರೀವಿಧುಶೇಖರಭಾರತೀ ಮಹಾಸ್ವಾಮಿಗಳು ಇವರೀರ್ವರುಗಳ ಪಾದಪದ್ಮಗಳಿಗೆ ಸಾಷ್ಟಾಂಗಪ್ರಣಾಮಗಳನ್ನು ಸಮರ್ಪಿಸುತ್ತೇವೆ.

# ತೋಟಕಾಷ್ಟಕ

**ಶ್ರೀತೋಟಕಾಚಾರ್ಯರಿಂದ ಶೃಂಗೇರಿಯಲ್ಲಿಯೇ ರಚಿತವಾದ ಈ ಸ್ತೋತ್ರವು ಶ್ರೀಶಂಕರಾಚಾರ್ಯರ ಮಹಿಮೆಯನ್ನು ತಿಳಿಸುತ್ತದೆ.**

ವಿದಿತಾಖಿಲಶಾಸ್ತ್ರಸುಧಾಜಲಧೇ
ಮಹಿತೋಪನಿಷತ್ಕಥಿತಾರ್ಥನಿಧೇ ।
ಹೃದಯೇ ಕಲಯೇ ವಿಮಲಂ ಚರಣಮ್
ಭವ ಶಂಕರದೇಶಿಕ ಮೇ ಶರಣಮ್ ॥ 1 ॥

ಅಮೃತಸಾಗರದಂತಿರುವ ಸಕಲಶಾಸ್ತ್ರಗಳನ್ನರಿತಿರುವವರು, ಶ್ರೇಷ್ಠವಾದ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದ ತತ್ತ್ವಗಳಿಗೆ ಆಕರವಾಗಿರುವ ಶ್ರೀಶಂಕರಗುರುವರೇಣ್ಯರೇ! ತಮ್ಮ ಪವಿತ್ರಚರಣಗಳನ್ನು ಹೃದಯದಲ್ಲಿ ಧ್ಯಾನಿಸುತ್ತೇನೆ. ನನ್ನನ್ನು ಉದ್ಧರಿಸಿರಿ.

ಕರುಣಾವರುಣಾಲಯ ಪಾಲಯ ಮಾಮ್
ಭವಸಾಗರದುಃಖವಿದೂನಹೃದಮ್ ।
ರಚಯಾಖಿಲದರ್ಶನತತ್ತ್ವವಿದಮ್
ಭವ ಶಂಕರದೇಶಿಕ ಮೇ ಶರಣಮ್ ॥ 2 ॥

ಕರುಣಾಸಮುದ್ರರಾದ ನೀವು ಸಂಸಾರಸಾಗರದುಃಖದಿಂದ ನೊಂದ ಹೃದಯವುಳ್ಳ ನನ್ನನ್ನು ಪಾಲಿಸಿರಿ. ಸಕಲದರ್ಶನಗಳ ತತ್ತ್ವವನ್ನರಿತವನನ್ನಾಗಿ ಮಾಡಿರಿ. ಶ್ರೀಶಂಕರಗುರುವರೇಣ್ಯರೇ! ನನ್ನನ್ನು ಉದ್ಧರಿಸಿರಿ.

ಭವತಾ ಜನತಾ ಸುಹಿತಾ ಭವಿತಾ
ನಿಜಬೋಧವಿಚಾರಣಚಾರುಮತೇ ।
ಕಲಯೇಶ್ವರಜೀವವಿವೇಕವಿದಮ್
ಭವ ಶಂಕರದೇಶಿಕ ಮೇ ಶರಣಮ್ ॥ 3 ॥

ತಮ್ಮಿಂದ ಎಲ್ಲ ಜನರು ಶ್ರೇಯೋವಂತರಾಗಿದ್ದಾರೆ. ಆತ್ಮತತ್ತ್ವವಿಚಾರದಲ್ಲಿ ನಿಪುಣಮತಿಗಳಾದ ತಾವು ನನ್ನನ್ನು ಜೀವಾತ್ಮ–ಪರಮಾತ್ಮ ವಿವೇಕವುಳ್ಳವನನ್ನಾಗಿ ಮಾಡಿರಿ. ಶ್ರೀಶಂಕರಗುರುವರೇಣ್ಯರೇ! ನನ್ನನ್ನು ಉದ್ಧರಿಸಿರಿ.

**ಭವ ಏವ ಭವಾನಿತಿ ಮೇ ನಿತರಾಮ್**
**ಸಮಜಾಯತ ಚೇತಸಿ ಕೌತುಕಿತಾ ।**
**ಮಮ ವಾರಯ ಮೋಹಮಹಾಜಲಧಿಮ್**
**ಭವ ಶಂಕರದೇಶಿಕ ಮೇ ಶರಣಮ್ ॥ 4 ॥**

ಸಾಕ್ಷಾತ್ ಪರಮೇಶ್ವರನೇ ತಾವೆಂದು ತಿಳಿದ ನನ್ನ ಮನಸ್ಸಿನಲ್ಲಿ ತಮ್ಮಿಂದ ಪರಮತತ್ತ್ವವನ್ನು ತಿಳಿಯಲು ತುಂಬಾ ಕುತೂಹಲವು ಉಂಟಾಯಿತು. ಮಹಾಸಮುದ್ರದಷ್ಟು ದೊಡ್ಡದಾದ ನನ್ನ ಮೋಹವನ್ನು ನಿವಾರಿಸಿರಿ. ಶ್ರೀಶಂಕರಗುರುವರೇಣ್ಯರೇ! ನನ್ನನ್ನು ಉದ್ಧರಿಸಿರಿ.

**ಸುಕೃತೇಽಧಿಕೃತೇ ಬಹುಧಾ ಭವತೋ**
**ಭವಿತಾ ಪದದರ್ಶನಲಾಲಸತಾ ।**
**ಅತಿದೀನಮಿಮಂ ಪರಿಪಾಲಯ ಮಾಮ್**
**ಭವ ಶಂಕರದೇಶಿಕ ಮೇ ಶರಣಮ್ ॥ 5 ॥**

ನನ್ನ ಬಹುವಿಧವಾದ ಪುಣ್ಯದಿಂದ ನಿಮ್ಮ ಪಾದದರ್ಶನದ ಅಭಿಲಾಷೆಯುಂಟಾಗುವುದು. ಅತಿ ದೀನನಾದ ನನ್ನನ್ನು ಪರಿಪಾಲಿಸಿರಿ, ಶ್ರೀಶಂಕರಗುರುವರೇಣ್ಯರೇ! ನನ್ನನ್ನು ಉದ್ಧರಿಸಿರಿ.

**ಜಗತೀಮವಿತುಂ ಕಲಿತಾಕೃತಯೋ**
**ವಿಚರಂತಿ ಮಹಾಮಹಸಶ್ಛಲತಃ ।**
**ಅಹಿಮಾಂಶುರಿವಾತ್ರ ವಿಭಾಸಿ ಗುರೋ**
**ಭವ ಶಂಕರದೇಶಿಕ ಮೇ ಶರಣಮ್ ॥ 6 ॥**

ಜಗತ್ತನ್ನು ಕಾಪಾಡಲು ಶರೀರಧಾರಿಗಳಾಗಿ ತಮ್ಮಂತಹ ಮಹಾಮಹಿಮರು ಸಂಚರಿಸುತ್ತಾರಷ್ಟೆ. ಸೂರ್ಯನಂತೆ ಕಂಗೊಳಿಸುತ್ತಿರುವ ಶ್ರೀಶಂಕರ ಗುರುವರೇಣ್ಯರೇ! ನನ್ನನ್ನು ಉದ್ಧರಿಸಿರಿ.

**ಗುರುಪುಂಗವ ಪುಂಗವಕೇತನ ತೇ**
**ಸಮತಾಮಯತಾಂ ನ ಹಿ ಕೋಽಪಿ ಸುಧೀಃ ।**
**ಶರಣಾಗತವತ್ಸಲ ತತ್ತ್ವನಿಧೇ**
**ಭವ ಶಂಕರದೇಶಿಕ ಮೇ ಶರಣಮ್ ॥ 7 ॥**

ಗುರುಶ್ರೇಷ್ಠರೇ! ವೃಷಭಧ್ವಜನಾದ ಪರಮಶಿವನಸ್ವರೂಪರೇ! ತಮಗೆ ಯಾವ ವಿದ್ವಾಂಸನೂ ಸಮನಾಗಲಾರ. ಶರಣುಬೇಡಿದವರನ್ನು ಕರುಣೆಯಿಂದ ರಕ್ಷಿಸುವವರು, ತತ್ತ್ವನಿಧಿಗಳೂ ಆದ ಶ್ರೀಶಂಕರಗುರುವರೇಣ್ಯರೇ! ನನ್ನನ್ನು ಉದ್ಧರಿಸಿರಿ.

**ವಿದಿತಾ ನ ಮಯಾ ವಿಶದೈಕಕಲಾ**
**ನ ಚ ಕಿಂಚನ ಕಾಂಚನಮಸ್ತಿ ಗುರೋ ।**
**ದ್ರುತಮೇವ ವಿಧೇಹಿ ಕೃಪಾಂ ಸಹಜಾಮ್**
**ಭವ ಶಂಕರದೇಶಿಕ ಮೇ ಶರಣಮ್ ॥ 8 ॥**

ನಾನು ಯಾವೊಂದು ಕಲೆಯನ್ನೂ ಸ್ಪಷ್ಟವಾಗಿ ತಿಳಿದವನಲ್ಲ, ಗುರುವೇ! ನನ್ನ ಬಳಿ ಅಲ್ಪ-ಸ್ವಲ್ಪ ಸಂಪತ್ತೂ ಸಹ ಇಲ್ಲ. ಆದರೂ ಶೀಘ್ರವಾಗಿ ತಮ್ಮ ಸಹಜವಾದ ಕೃಪೆಯನ್ನು ತೋರಿ, ಶ್ರೀಶಂಕರಗುರುವರೇಣ್ಯರೇ! ನನ್ನನ್ನು ಉದ್ಧರಿಸಿರಿ.

# ಶ್ರೀಶಂಕರ ಭಗವತ್ಪಾದಾಚಾರ್ಯಸ್ತವ

**ಜಗದ್ಗುರು ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರಿಂದ ರಚಿತವಾದ ಈ ಸ್ತೋತ್ರವು ಶ್ರೀಶಂಕರಾಚಾರ್ಯರ ಮಹಿಮೆಯನ್ನು ತಿಳಿಸುತ್ತದೆ.**

ಮುದಾ ಕರೇಣ ಪುಸ್ತಕಂ ದಧಾನಮೀಶರೂಪಿಣಂ
ತಥಾಽಪರೇಣ ಮುದ್ರಿಕಾಂ ನಮತ್ತಮೋವಿನಾಶಿನೀಮ್ ।
ಕುಸುಂಭವಾಸಸಾವೃತಂ ವಿಭೂತಿಭಾಸಿಫಾಲಕಂ
ನತಾಘನಾಶನೇ ರತಂ ನಮಾಮಿ ಶಂಕರಂ ಗುರುಮ್ ॥ 1 ॥

ಒಂದು ಕೈಯಲ್ಲಿ ಪುಸ್ತಕವನ್ನೂ, ಮತ್ತೊಂದು ಕೈಯಲ್ಲಿ ಭಕ್ತರ ಅಜ್ಞಾನವನ್ನು ನಿವಾರಿಸುವ ಜ್ಞಾನಮುದ್ರೆಯನ್ನೂ ಧರಿಸಿರುವ, ಕಾಷಾಯವಸ್ತ್ರವನ್ನುಟ್ಟಿರುವ, ಹಣೆಯಲ್ಲಿ ಭಸ್ಮಧಾರಣೆ ಮಾಡಿರುವ, ಭಕ್ತರ ಪಾಪಗಳನ್ನು ನಾಶಮಾಡುವ, ಪರಮೇಶ್ವರ ಸ್ವರೂಪರಾದ, ಗುರುಗಳಾದ ಶ್ರೀಶಂಕರಭಗವತ್ಪಾದರನ್ನು ನಮಸ್ಕರಿಸುತ್ತೇನೆ.

ಪರಾಶರಾತ್ಮಜಪ್ರಿಯಂ ಪವಿತ್ರಿತಕ್ಷಮಾತಲಂ
ಪುರಾಣಸಾರವೇದಿನಂ ಸನಂದನಾದಿಸೇವಿತಮ್ ।
ಪ್ರಸನ್ನವಕ್ತ್ರಪಂಕಜಂ ಪ್ರಪನ್ನಲೋಕರಕ್ಷಕಂ
ಪ್ರಕಾಶಿತಾದ್ವಿತೀಯತತ್ತ್ವಮಾಶ್ರಯಾಮಿ ದೇಶಿಕಮ್ ॥ 2 ॥

ವೇದವ್ಯಾಸರಿಗೆ ಅತ್ಯಂತ ಪ್ರೀತಿಪಾತ್ರರೂ, ತಮ್ಮ ಅವತಾರದಿಂದ ಭೂಮಿಯನ್ನು ಪವಿತ್ರಗೊಳಿಸಿದವರೂ, ಪುರಾಣಗಳ ಸಾರವನ್ನು ತಿಳಿದವರೂ, ಸನಂದನ ಮೊದಲಾದ ಶಿಷ್ಯರಿಂದ ಸೇವಿತರೂ, ಪ್ರಸನ್ನವಾದ ಮುಖಕಮಲವುಳ್ಳವರೂ, ಆಶ್ರಿತಜನರ ರಕ್ಷಕರೂ, ಅದ್ವೈತ ತತ್ತ್ವವನ್ನು ಬೆಳಗಿದವರೂ ಆದ ಶ್ರೀಶಂಕರದೇಶಿಕರನ್ನು ಆಶ್ರಯಿಸುತ್ತೇನೆ.

ಸುಧಾಂಶುಶೇಖರಾರ್ಚಕಂ ಸುಧೀಂದ್ರಸೇವ್ಯಪಾದುಕಂ
ಸುತಾದಿಮೋಹನಾಶಕಂ ಸುಶಾಂತಿದಾಂತಿದಾಯಕಮ್ ।
ಸಮಸ್ತವೇದಪಾರಗಂ ಸಹಸ್ರಸೂರ್ಯಭಾಸುರಂ
ಸಮಾಹಿತಾಖಿಲೇಂದ್ರಿಯಂ ಸದಾ ಭಜಾಮಿ ಶಂಕರಮ್ ॥ 3 ॥

ಚಂದ್ರಮೌಳೀಶ್ವರರನ್ನು ಪೂಜಿಸುವವರೂ, ಪಂಡಿತರು ಸೇವೆಸಲ್ಲಿಸುವ ಪಾದಗಳುಳ್ಳವರೂ, ಹೆಂಡತಿ ಮಕ್ಕಳು ಮೊದಲಾದ ಮೋಹವನ್ನು ನಿವಾರಿಸುವವರೂ, ಶಮದಮಾದಿಗುಣಗಳನ್ನು ನೀಡುವವರೂ, ಸಕಲವೇದಗಳಲ್ಲಿ ಪಾರಂಗತರೂ, ಸಹಸ್ರಸೂರ್ಯರ ಪ್ರಕಾಶವುಳ್ಳವರೂ, ಎಲ್ಲ ಇಂದ್ರಿಯಗಳನ್ನು ನಿಗ್ರಹಿಸಿದವರೂ ಆದ ಶ್ರೀಶಂಕರಭಗವತ್ಪಾದರನ್ನು ಭಜಿಸುತ್ತೇನೆ.

ಯಮೀಂದ್ರಚಕ್ರವರ್ತಿನಂ ಯಮಾದಿಯೋಗವೇದಿನಂ
ಯಥಾರ್ಥತತ್ತ್ವಬೋಧಕಂ ಯಮಾಂತಕಾತ್ಮಜಾರ್ಚಕಮ್ ।
ಯಮೇವ ಮುಕ್ತಿಕಾಂಕ್ಷಯಾ ಸಮಾಶ್ರಯಂತಿ ಸಜ್ಜನಾಃ
ನಮಾಮ್ಯಹಂ ಸದಾ ಗುರುಂ ತಮೇವ ಶಂಕರಾಭಿಧಮ್ ॥ 4 ॥

ಯತಿಚಕ್ರವರ್ತಿಗಳೂ, ಯಮನಿಯಮಾದಿಯೋಗಗಳನ್ನರಿತವರೂ, ಯಥಾರ್ಥವಾದ ತತ್ತ್ವವನ್ನು ಉಪದೇಶಿಸುವವರೂ, ಶ್ರೀಗಣಪತಿಯನ್ನು ಪೂಜಿಸುವವರೂ, ಸತ್ಪುರುಷರು ಮುಕ್ತಿಯನ್ನು ಪಡೆಯುವ ಇಚ್ಛೆಯಿಂದ ಯಾರನ್ನು ಆಶ್ರಯಿಸುತ್ತಾರೋ ಅಂತಹ ಶ್ರೀಶಂಕರಾಚಾರ್ಯರೆಂಬ ಹೆಸರಿನ ಗುರುಗಳಿಗೆ ಯಾವಾಗಲೂ ನಮಸ್ಕಾರ ಮಾಡುತ್ತೇನೆ.

ಸ್ವಬಾಲ್ಯ ಏವ ನಿರ್ಭರಂ ಯ ಆತ್ಮನೋ ದಯಾಲುತಾಂ
ದರಿದ್ರವಿಪ್ರಮಂದಿರೇ ಸುವರ್ಣವೃಷ್ಟಿಮಾನಯನ್ ।
ಪ್ರದರ್ಶ್ಯ ವಿಸ್ಮಯಾಂಬುಧೌ ನ್ಯಮಜ್ಜಯತ್ಸಮಾನ್ ಜನಾನ್
ಸ ಏವ ಶಂಕರಸ್ಸದಾ ಜಗದ್ಗುರುರ್ಗತಿರ್ಮಮ ॥ 5 ॥

ಯಾವ ಮಹನೀಯರು ಬಾಲ್ಯದಲ್ಲಿಯೇ ದರಿದ್ರಬ್ರಾಹ್ಮಣನ ಮನೆಯಲ್ಲಿ ಬಂಗಾರದ (ನೆಲ್ಲಿಕಾಯಿಗಳ) ಮಳೆ ಸುರಿಸಿ ತಮ್ಮ ಅತ್ಯಂತ ದಯಾಳು ಸ್ವಭಾವವನ್ನು ತೋರಿಸಿ ಎಲ್ಲ ಜನರನ್ನು ಆಶ್ಚರ್ಯಸಾಗರದಲ್ಲಿ ಮುಳುಗಿಸಿದರೋ ಆ ಜಗದ್ಗುರುಗಳಾದ ಶ್ರೀಶಂಕರಾಚಾರ್ಯರೇ ನನಗೆ ಸದಾ ಆಶ್ರಯ.

ಯದೀಯಪುಣ್ಯಜನ್ಮನಾ ಪ್ರಸಿದ್ಧಿಮಾಪ ಕಾಲಟೀ
ಯದೀಯಶಿಷ್ಯತಾಂ ವ್ರಜನ್ ಸ ತೋಟಕೋಽಪಿ ಪಪ್ರಥೇ ।
ಯ ಏವ ಸರ್ವದೇಹಿನಾಂ ವಿಮುಕ್ತಿಮಾರ್ಗದರ್ಶಕಃ
ನರಾಕೃತಿಂ ಸದಾಶಿವಂ ತಮಾಶ್ರಯಾಮಿ ಸದ್ಗುರುಮ್ ॥ 6 ॥

ಯಾರ ಪುಣ್ಯಜನ್ಮದಿಂದಾಗಿ ಕಾಲಟಿಯು ಪ್ರಸಿದ್ಧಿಯನ್ನು ಹೊಂದಿತೋ, ಯಾರ ಶಿಷ್ಯರಾಗಿ ಆ ತೋಟಕಾಚಾರ್ಯರು ಪ್ರಸಿದ್ಧರಾದರೋ, ಎಲ್ಲ ಮಾನವರಿಗೂ ಯಾರು ಮೋಕ್ಷದ ಮಾರ್ಗವನ್ನು ತೋರಿಸಿದ್ದಾರೋ, ಆ ಪುರುಷರೂಪಧಾರಿ ಪರಮೇಶ್ವರನಾದ ಸದ್ಗುರು ಶ್ರೀಶಂಕರಭಗವತ್ಪಾದರನ್ನು ಸದಾ ಭಜಿಸುತ್ತೇನೆ.

ಸನಾತನಸ್ಯ ವರ್ತ್ಮನಃ ಸದೈವ ಪಾಲನಾಯ ಯಃ
ಚತುರ್ದಿಶಾಸು ಸನ್ಮಠಾನ್ ಚಕಾರ ಲೋಕವಿಶ್ರುತಾನ್ ।
ವಿಭಾಂಡಕಾತ್ಮಜಾಶ್ರಮಾದಿಸುಸ್ಥಲೇಷು ಪಾವನಾನ್
ತಮೇವ ಲೋಕಶಂಕರಂ ನಮಾಮಿ ಶಂಕರಂ ಗುರುಮ್ ॥ 7 ॥

ಯಾರು ಸನಾತನಧರ್ಮದ ಪರಿರಕ್ಷಣೆಗಾಗಿ ಈ ದೇಶದ ನಾಲ್ಕು ದಿಕ್ಕುಗಳಲ್ಲಿ ಶೃಂಗೇರಿ ಮೊದಲಾದ ಪವಿತ್ರಸ್ಥಳಗಳಲ್ಲಿ ಜಗದ್ವಿಖ್ಯಾತವಾದ ಮಠಗಳನ್ನು ಸ್ಥಾಪಿಸಿದರೋ, ಲೋಕಕ್ಕೆ ಮಂಗಳವುಂಟುಮಾಡುವ ಶ್ರೀಶಂಕರಭಗವತ್ಪಾದ ಗುರುಗಳನ್ನು ನಮಸ್ಕರಿಸುತ್ತೇನೆ.

ಯದೀಯಹಸ್ತವಾರಿಜಾತಸುಪ್ರತಿಷ್ಠಿತಾ ಸತೀ
ಪ್ರಸಿದ್ಧಶೃಂಗಭೂಧರೇ ಸದಾ ಪ್ರಶಾಂತಿಭಾಸುರೇ ।
ಸ್ವಭಕ್ತಪಾಲನವ್ರತಾ ವಿರಾಜತೇ ಹಿ ಶಾರದಾ
ಸ ಶಂಕರಃ ಕೃಪಾನಿಧಿಃ ಕರೋತು ಮಾಮನೇನಸಮ್ ॥ 8 ॥

ಪ್ರಶಾಂತ ರಮಣೀಯವೂ, ಪ್ರಸಿದ್ಧವೂ ಆದ ಶೃಂಗೇರಿಯಲ್ಲಿ ಯಾರ ಹಸ್ತಕಮಲಗಳಿಂದ ಸುಪ್ರತಿಷ್ಠಿತಳಾಗಿ ತನ್ನ ಭಕ್ತರನ್ನು ಪಾಲಿಸುತ್ತಾ ಶಾರದೆಯು ಶೋಭಿಸುತ್ತಿದ್ದಾಳೋ, ಅಂತಹ ಕೃಪಾನಿಧಿಗಳಾದ ಶ್ರೀಶಂಕರಾಚಾರ್ಯರು ನನ್ನನ್ನು ಪಾಪರಹಿತನನ್ನಾಗಿ ಮಾಡಲಿ.

ಇಮಂ ಸ್ತವಂ ಜಗದ್ಗುರೋರ್ಗುಣಾನುವರ್ಣನಾತ್ಮಕಂ
ಸಮಾದರೇಣ ಯಃ ಪಠೇದನನ್ಯಭಕ್ತಿಸಂಯುತಃ ।
ಸಮಾಪ್ನುಯಾತ್ಸಮೀಹಿತಂ ಮನೋರಥಂ ನರೋಽಚಿರಾತ್
ದಯಾನಿಧೇಸ್ಸ ಶಂಕರಸ್ಯ ಸದ್ಗುರೋಃ ಪ್ರಸಾದತಃ ॥ 9 ॥

ಜಗದ್ಗುರುಗಳ ಗುಣಗಳನ್ನು ವರ್ಣಿಸುವ ಈ ಸ್ತೋತ್ರವನ್ನು ಅನನ್ಯಭಕ್ತಿಯಿಂದ, ಆದರದಿಂದ, ಯಾವನು ಪಠಿಸುತ್ತಾನೋ ಆ ವ್ಯಕ್ತಿಯು ದಯಾನಿಧಿಗಳಾದ ಸದ್ಗುರುಗಳಾದ ಶ್ರೀಶಂಕರಭಗವತ್ಪಾದಾರ ಅನುಗ್ರಹದಿಂದ ಬೇಗನೆ ಬಯಸಿದ ಮನೋರಥವನ್ನು ಪಡೆಯಲಿ.



ಜಗದ್ಗುರು ಶ್ರೀಶಂಕರಾಚಾರ್ಯರ 32 ಅಡಿ ಎತ್ತರದ ಶಿಲಾಮಯ ವಿಗ್ರಹ
(ಶಂಕರಗಿರಿ, ಶೃಂಗೇರಿ)

# ಶ್ರೀಶಂಕರ ಭಗವತ್ಪಾದಾಚಾರ್ಯ ಅಷ್ಟೋತ್ತರ ಶತನಾಮಾವಳಿ

ಶ್ರೀಶಂಕರಾಚಾರ್ಯವರ್ಯಾಯ ನಮಃ
ಬ್ರಹ್ಮಾನಂದಪ್ರದಾಯಕಾಯ ನಮಃ
ಅಜ್ಞಾನತಿಮಿರಾದಿತ್ಯಾಯ ನಮಃ
ಸುಜ್ಞಾನಾಂಬುಧಿಚಂದ್ರಮಸೇ ನಮಃ
ವರ್ಣಾಶ್ರಮಪ್ರತಿಷ್ಠಾತ್ರೇ ನಮಃ 5
ಶ್ರೀಮತೇ ನಮಃ
ಮುಕ್ತಿಪ್ರದಾಯಕಾಯ ನಮಃ
ಶಿಷ್ಯೋಪದೇಶನಿರತಾಯ ನಮಃ
ಭಕ್ತಾಭೀಷ್ಟಪ್ರದಾಯಕಾಯ ನಮಃ
ಸೂಕ್ಷ್ಮತತ್ತ್ವರಹಸ್ಯಜ್ಞಾಯ ನಮಃ 10
ಕಾರ್ಯಾಕಾರ್ಯಪ್ರಬೋಧಕಾಯ ನಮಃ
ಜ್ಞಾನಮುದ್ರಾಂಚಿತಕರಾಯ ನಮಃ
ಶಿಷ್ಯಹೃತ್ತಾಪಹಾರಕಾಯ ನಮಃ
ಪರಿವ್ರಾಜಾಶ್ರಮೋದ್ಧರ್ತ್ರೇ ನಮಃ
ಸರ್ವತಂತ್ರಸ್ವತಂತ್ರಧಿಯೇ ನಮಃ 15
ಅದ್ವೈತಸ್ಥಾಪನಾಚಾರ್ಯಾಯ ನಮಃ
ಸಾಕ್ಷಾಚ್ಛಂಕರರೂಪಧೃತೇ ನಮಃ
ಷಣ್ಮತಸ್ಥಾಪನಾಚಾರ್ಯಾಯ ನಮಃ
ತ್ರಯೀಮಾರ್ಗಪ್ರಕಾಶಕಾಯ ನಮಃ
ವೇದವೇದಾಂತತತ್ತ್ವಜ್ಞಾಯ ನಮಃ 20
ದುರ್ವಾದಿಮತಖಂಡನಾಯ ನಮಃ
ವೈರಾಗ್ಯನಿರತಾಯ ನಮಃ
ಶಾಂತಾಯ ನಮಃ
ಸಂಸಾರಾರ್ಣವತಾರಕಾಯ ನಮಃ
ಪ್ರಸನ್ನವದನಾಂಭೋಜಾಯ ನಮಃ 25
ಪರಮಾರ್ಥಪ್ರಕಾಶಕಾಯ ನಮಃ

1. ಪೂಜ್ಯರಾದ ಶ್ರೀಶಂಕರಾಚಾರ್ಯರಿಗೆ ನಮಸ್ಕಾರ
2. ಶಿಷ್ಯರಿಗೆ ಬ್ರಹ್ಮಾನಂದವನ್ನು ನೀಡುವವರು
3. ಅಜ್ಞಾನವನ್ನು ಹೋಗಲಾಡಿಸುವವರು
4. ಶಿಷ್ಯರ ಜ್ಞಾನವನ್ನು ವೃದ್ಧಿಸುವವರು
5. ವರ್ಣಾಶ್ರಮ ಧರ್ಮಗಳನ್ನು ರಕ್ಷಿಸಿದವರು
6. ಸರ್ವೋತ್ಕೃಷ್ಟರಾದವರು
7. ಮೋಕ್ಷವನ್ನು ಅನುಗ್ರಹಿಸುವವರು
8. ಶಿಷ್ಯರಿಗೆ ಧರ್ಮಬ್ರಹ್ಮತತ್ತ್ವಗಳನ್ನು ಉಪದೇಶಿಸುವವರು
9. ಭಕ್ತರ ಇಷ್ಟಾರ್ಥಗಳನ್ನು ಕರುಣಿಸುವವರು
10. ಸೂಕ್ಷವಾದ ಬ್ರಹ್ಮತತ್ತ್ವವನ್ನು ತಿಳಿದವರು
11. ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂಬುದನ್ನು ಸರಿಯಾಗಿ ತಿಳಿಸಿಕೊಡುವವರು
12. ಚಿನ್ಮುದ್ರೆಯನ್ನು ಕೈಯಲ್ಲಿ ಧರಿಸಿರುವವರು
13. ಶಿಷ್ಯರ ಮನಸ್ಸಿನ ತಾಪವನ್ನು ಹೋಗಲಾಡಿಸುವವರು
14. ಸಂನ್ಯಾಸ ಆಶ್ರಮವನ್ನು ಪುನರುದ್ಧಾರ ಮಾಡಿದವರು
15. ಎಲ್ಲ ಶಾಸ್ತ್ರಗಳಲ್ಲಿಯೂ ಅಸಾಧಾರಣವಾದ ಪ್ರತಿಭೆಯುಳ್ಳವರು
16. ಅದ್ವೈತ ಸಿದ್ಧಾಂತವನ್ನು ಸ್ಥಾಪಿಸಿದವರು
17. ಪರಮೇಶ್ವರನ ಅವತಾರಸ್ವರೂಪರು
18. ಶೈವ, ವೈಷ್ಣವ, ಶಾಕ್ತ, ಗಾಣಪಾತ್ಯ, ಸೌರ, ಕೌಮಾರ ಎಂಬ ಮತಗಳನ್ನು ಸ್ಥಾಪಿಸಿದವರು
19. ವೈದಿಕಧರ್ಮವನ್ನು ಪ್ರಕಾಶಪಡಿಸಿದವರು
20. ವೇದ–ವೇದಾಂತಗಳ ತತ್ತ್ವವನ್ನು ತಿಳಿದವರು
21. ವೇದವಿರುದ್ಧ ಮತವನ್ನು ಖಂಡಿಸುವವರು
22. ಅತ್ಯಂತ ವೈರಾಗ್ಯಶಾಲಿಗಳು
23. ಮನಸ್ಸನ್ನು, ಇಂದ್ರಿಯಗಳನ್ನು ನಿಗ್ರಹಿಸಿದವರು
24. ಸಂಸಾರವೆಂಬ ಸಾಗರವನ್ನು ದಾಟಿಸುವವರು
25. ಪ್ರಸನ್ನವಾದ ಮುಖಾರವಿಂದವನ್ನು ಹೊಂದಿರುವವರು
26. ಬ್ರಹ್ಮ ತತ್ತ್ವವನ್ನು ತೋರಿಸಿಕೊಡುವವರು

ಪುರಾಣಸ್ಮೃತಿಸಾರಜ್ಞಾಯ ನಮಃ
ನಿತ್ಯತೃಪ್ತಾಯ ನಮಃ
ಮಹತೇ ನಮಃ
ಶುಚಯೇ ನಮಃ 30
ನಿತ್ಯಾನಂದಾಯ ನಮಃ
ನಿರಾತಂಕಾಯ ನಮಃ
ನಿಸ್ಸಂಗಾಯ ನಮಃ
ನಿರ್ಮಲಾತ್ಮಕಾಯ ನಮಃ
ನಿರ್ಮಮಾಯ ನಮಃ 35
ನಿರಹಂಕಾರಾಯ ನಮಃ
ವಿಶ್ವವಂದ್ಯಪದಾಂಬುಜಾಯ ನಮಃ
ಸತ್ತ್ವಪ್ರಧಾನಾಯ ನಮಃ
ಸದ್ಭಾವಾಯ ನಮಃ
ಸಂಖ್ಯಾತೀತಗುಣೋಜ್ಜ್ವಲಾಯ ನಮಃ 40
ಅನಘಾಯ ನಮಃ
ಸಾರಹೃದಯಾಯ ನಮಃ
ಸುಧಿಯೇ ನಮಃ
ಸಾರಸ್ವತಪ್ರದಾಯ ನಮಃ
ಸತ್ಯಾತ್ಮನೇ ನಮಃ 45
ಪುಣ್ಯಶೀಲಾಯ ನಮಃ
ಸಾಂಖ್ಯಯೋಗವಿಚಕ್ಷಣಾಯ ನಮಃ
ತಪೋರಾಶಯೇ ನಮಃ
ಮಹಾತೇಜಸೇ ನಮಃ
ಗುಣತ್ರಯವಿಭಾಗವಿದೇ ನಮಃ 50
ಕಲಿಘ್ನಾಯ ನಮಃ
ಕಾಲಕರ್ಮಜ್ಞಾಯ ನಮಃ
ತಮೋಗುಣನಿವಾರಕಾಯ ನಮಃ
ಭಗವತೇ ನಮಃ

27. ಪುರಾಣಗಳ ಮತ್ತು ಸ್ಮೃತಿಗಳ ಸಾರವನ್ನು ತಿಳಿದವರು
28. ಸದಾ ತೃಪ್ತರಾಗಿರುವವರು
29. ಮಹಾತ್ಮರು
30. ಪವಿತ್ರರಾಗಿರುವವರು
31. ಸದಾ ಆನಂದಸ್ವರೂಪರಾಗಿರುವವರು
32. ಭಯವಿಲ್ಲದವರು
33. ಸಂಸಾರ ಬಂಧನವನ್ನು ಹೊಂದಿರದವರು
34. ಪರಿಶುದ್ಧವಾದ ಮನಸ್ಸುಳ್ಳವರು
35. ನನ್ನದು ಎಂಬ ಮಮಕಾರವಿಲ್ಲದವರು
36. ಅಹಂಕಾರ ರಹಿತರು
37. ಎಲ್ಲರಿಂದಲೂ ವಂದಿಸಲ್ಪಡುವ ಪಾದಕಮಲಗಳುಳ್ಳವರು
38. ಸತ್ವಗುಣವನ್ನೇ ಪ್ರಧಾನವಾಗಿ ಹೊಂದಿರುವವರು
39. ಉತ್ತಮವಾದ ಆಶಯವುಳ್ಳವರು
40. ಅಸಂಖ್ಯಾತವಾದ ಸದ್ಗುಣಗಳಿಂದ ಶೋಭಿತರಾದವರು
41. ಪಾಪರಹಿತರು
42. ದೃಢವಾದ ಮನಸ್ಸುಳ್ಳವರು
43. ಪಂಡಿತರು
44. ವಿದ್ಯೆಯನ್ನು ಕರುಣಿಸುವವರು
45. ಸತ್ಯಸ್ವರೂಪರು
46. ಪವಿತ್ರವಾದ ಸ್ವಭಾವವುಳ್ಳವರು
47. ಸಾಂಖ್ಯ ಹಾಗೂ ಯೋಗ ಶಾಸ್ತ್ರದಲ್ಲಿ ತಳಸ್ಪರ್ಶಿಪಾಂಡಿತ್ಯವುಳ್ಳವರು
48. ಮಹಾತಪಸ್ವಿಗಳಾದವರು
49. ಉತ್ಕೃಷ್ಟವಾದ ತೇಜಸ್ಸಿನಿಂದ ಕೂಡಿದವರು
50. ಸತ್ವ–ರಜಸ್ಸು–ತಮಸ್ಸು ಎಂಬ ಗುಣತ್ರಯಗಳ ವಿಭಾಗವನ್ನು ತಿಳಿದವರು
51. ಕಲಿಯುಗದ ದೋಷಗಳನ್ನು ನಿವಾರಿಸುವವರು
52. ಕಾಲ ಮತ್ತು ಕರ್ಮಗಳನ್ನು ತಿಳಿದವರು
53. ತಮೋಗುಣವನ್ನು ನಿವಾರಿಸುವವರು
54. ಷಡ್ವಿಧೈಶ್ವರ್ಯ ಸಂಪನ್ನರು

ಭಾರತೀಜೇತ್ರೇ ನಮಃ 55
ಶಾರದಾಹ್ವಾನಪಂಡಿತಾಯ ನಮಃ
ಧರ್ಮಾಧರ್ಮವಿಭಾಗಜ್ಞಾಯ ನಮಃ
ಲಕ್ಷ್ಯಭೇದಪ್ರದರ್ಶಕಾಯ ನಮಃ
ನಾದಬಿಂದುಕಲಾಭಿಜ್ಞಾಯ ನಮಃ
ಯೋಗಿಹೃತ್ಪದ್ಮಭಾಸ್ಕರಾಯ ನಮಃ 60
ಅತೀಂದ್ರಿಯಜ್ಞಾನನಿಧಯೇ ನಮಃ
ನಿತ್ಯಾನಿತ್ಯವಿವೇಕವತೇ ನಮಃ
ಚಿದಾನಂದಾಯ ನಮಃ
ಚಿನ್ಮಯಾತ್ಮನೇ ನಮಃ
ಪರಕಾಯಪ್ರವೇಶಕೃತೇ ನಮಃ 65
ಅಮಾನುಷಚರಿತ್ರಾಢ್ಯಾಯ ನಮಃ
ಕ್ಷೇಮದಾಯಿನೇ ನಮಃ
ಕ್ಷಮಾಕರಾಯ ನಮಃ
ಭವ್ಯಾಯ ನಮಃ
ಭದ್ರಪ್ರದಾಯ ನಮಃ 70
ಭೂರಿಮಹಿಮ್ನೇ ನಮಃ
ವಿಶ್ವರಂಜಕಾಯ ನಮಃ
ಸ್ವಪ್ರಕಾಶಾಯ ನಮಃ
ಸದಾಧಾರಾಯ ನಮಃ
ವಿಶ್ವಬಂಧವೇ ನಮಃ 75
ಶುಭೋದಯಾಯ ನಮಃ
ವಿಶಾಲಕೀರ್ತಯೇ ನಮಃ
ವಾಗೀಶಾಯ ನಮಃ
ಸರ್ವಲೋಕಹಿತೋತ್ಸುಕಾಯ ನಮಃ
ಕೈಲಾಸಯಾತ್ರಾ–ಸಂಪ್ರಾಪ್ತ–ಚಂದ್ರಮೌಲಿ–ಪ್ರಪೂಜಕಾಯ ನಮಃ
ಕಾಂಚ್ಯಾಂ ಶ್ರೀಚಕ್ರರಾಜಾಖ್ಯ–ಯಂತ್ರಸ್ಥಾಪನ–ದೀಕ್ಷಿತಾಯ ನಮಃ

55. ಉಭಯಭಾರತಿಯನ್ನು ವಾದದಲ್ಲಿ ಸೋಲಿಸಿದವರು
56. ಶ್ರೀಶಾರದಾಪರಮೇಶ್ವರಿಯನ್ನು ಶೃಂಗೇರಿಕ್ಷೇತ್ರದಲ್ಲಿ ಪ್ರತಿಷ್ಠಿಸಿದವರು
57. ಧರ್ಮ ಅಧರ್ಮಗಳ ವಿಭಾಗವನ್ನು ತಿಳಿದವರು
58. ಕರ್ಮಿ, ಭಕ್ತ, ಉಪಾಸಕ ಮೊದಲಾದವರಿಗೆ ಅವರವರ ಲಕ್ಷ್ಯವನ್ನು ತೋರಿಸಿಕೊಟ್ಟವರು
59. ನಾದಕಲೆ ಹಾಗೂ ಬಿಂದುಕಲೆಗಳನ್ನು ತಿಳಿದವರು
60. ಯೋಗಿಗಳ ಮನಸ್ಸೆಂಬ ಕಮಲಕ್ಕೆ ಸೂರ್ಯನಂತಿರುವವರು (ಯೋಗಿಗಳಿಗೆ ಮುದವನ್ನೀಯುವವರು)
61. ಇಂದ್ರಿಯಗಳಿಗೆ ಅಗೋಚರವಾದ ಪದಾರ್ಥಗಳನ್ನು ತಿಳಿದವರು
62. ನಿತ್ಯ–ಅನಿತ್ಯ ವಸ್ತುಗಳ ವಿಭಾಗವನ್ನು ತಿಳಿದವರು
63. ಜ್ಞಾನ ಮತ್ತು ಆನಂದಸ್ವರೂಪರು
64. ಜ್ಞಾನಘನಸ್ವರೂಪರು
65. ಪರಕಾಯಪ್ರವೇಶವನ್ನು ಮಾಡಿರುವವರು
66. ಮನುಷ್ಯಮಾತ್ರರಿಗೆ ಅಸಾಧ್ಯವಾದ ಚರಿತ್ರೆಯುಳ್ಳವರು
67. ಸರ್ವರಿಗೂ ಕ್ಷೇಮವನ್ನು ಕೊಡುವವರು
68. ಕ್ಷಮಾಶೀಲರು
69. ಮಂಗಲಸ್ವರೂಪರು
70. ಮಂಗಲವನ್ನು ನೀಡುವವರು
71. ಮಹಾಮಹಿಮಶಾಲಿಗಳು
72. ಎಲ್ಲರನ್ನೂ ಸಂತೋಷಪಡಿಸುವವರು
73. ಸ್ವಯಂ ಜ್ಯೋತಿಸ್ವರೂಪರು
74. ಸಜ್ಜನರಿಗೆ ಆಶ್ರಯವಾಗಿರುವವರು
75. ಎಲ್ಲರಿಗೂ ಬೇಕಾಗಿರುವವರು
76. ಲೋಕಕ್ಷೇಮಕ್ಕಾಗಿ ಅವತರಿಸಿದವರು
77. ದಿಗಂತ ವಿಶ್ರಾಂತ ಕೀರ್ತಿಯುಳ್ಳವರು
78. ಸಕಲವಿದ್ಯಾಧಿಪತಿಗಳು
79. ಎಲ್ಲರಿಗೂ ಹಿತವನ್ನುಂಟು ಮಾಡುವವರು
80. ಕೈಲಾಸದಿಂದ ತಂದಿರುವ ಚಂದ್ರಮೌಲೀಶ್ವರನನ್ನು ಪೂಜಿಸುವವರು
81. ಕಾಂಚಿಕ್ಷೇತ್ರದಲ್ಲಿ ಶ್ರೀಕಾಮಾಕ್ಷಿ ಅಮ್ಮನವರ ಸನ್ನಿಧಿಯಲ್ಲಿ ಶ್ರೀಚಕ್ರವನ್ನು ಸ್ಥಾಪಿಸಿದವರು

ಶ್ರೀಚಕ್ರಾತ್ಮಕ–ತಾಟಂಕ–ತೋಷಿತಾಂಬಾ–ಮನೋರಥಾಯ ನಮಃ
ಶ್ರೀಬ್ರಹ್ಮಸೂತ್ರೋಪನಿಷದ್ಭಾಷ್ಯಾದಿ–ಗ್ರಂಥಕಲ್ಪಕಾಯ ನಮಃ
ಚತುರ್ದಿಕ್ಚತುರಾಮ್ನಾಯ ಪ್ರತಿಷ್ಠಾತ್ರೇ ನಮಃ
ಮಹಾಮತಯೇ ನಮಃ 85
ದ್ವಿಸಪ್ತತಿಮತೋಚ್ಛೇತ್ರೇ ನಮಃ
ಸರ್ವದಿಗ್ವಿಜಯಪ್ರಭವೇ ನಮಃ
ಕಾಷಾಯವಸನೋಪೇತಾಯ ನಮಃ
ಭಸ್ಮೋದ್ಧೂಲಿತವಿಗ್ರಹಾಯ ನಮಃ
ಜ್ಞಾನಾತ್ಮಕೈಕದಂಡಾಢ್ಯಾಯ ನಮಃ 90
ಕಮಂಡಲುಲಸತ್ಕರಾಯ ನಮಃ
ಗುರುಭೂಮಂಡಲಾಚಾರ್ಯಾಯ ನಮಃ
ಭಗವತ್ಪಾದಸಂಜ್ಞಕಾಯ ನಮಃ
ವ್ಯಾಸಸಂದರ್ಶನಪ್ರೀತಾಯ ನಮಃ
ಋಷ್ಯಶೃಂಗಪುರೇಶ್ವರಾಯ ನಮಃ 95
ಸೌಂದರ್ಯಲಹರೀಮುಖ್ಯ–ಬಹುಸ್ತೋತ್ರ–ವಿಧಾಯಕಾಯ ನಮಃ
ಚತುಷ್ಷಷ್ಟಿಕಲಾಭಿಜ್ಞಾಯ ನಮಃ
ಬ್ರಹ್ಮರಾಕ್ಷಸಮೋಕ್ಷದಾಯ ನಮಃ
ಶ್ರೀಮನ್ಮಂಡನಮಿಶ್ರಾಖ್ಯ–ಸ್ವಯಂಭೂಜಯ–ಸನ್ನುತಾಯ ನಮಃ
ತೋಟಕಾಚಾರ್ಯಸಂಪೂಜ್ಯಾಯ ನಮಃ 100
ಪದ್ಮಪಾದಾರ್ಚಿತಾಂಘ್ರಿಕಾಯ ನಮಃ
ಹಸ್ತಾಮಲಕ–ಯೋಗೀಂದ್ರ–ಬ್ರಹ್ಮಜ್ಞಾನ–ಪ್ರದಾಯಕಾಯ ನಮಃ
ಸುರೇಶ್ವರಾಖ್ಯ–ಸಚ್ಛಿಷ್ಯ–ಸಂನ್ಯಾಸಾಶ್ರಮದಾಯಕಾಯ ನಮಃ
ನೃಸಿಂಹಭಕ್ತಾಯ ನಮಃ
ಸದ್ರತ್ನಗರ್ಭಹೇರಂಬ–ಪೂಜಕಾಯ ನಮಃ
ವ್ಯಾಖ್ಯಾಸಿಂಹಾಸನಾಧೀಶಾಯ ನಮಃ
ಜಗತ್ಪೂಜ್ಯಾಯ ನಮಃ
ಜಗದ್ಗುರವೇ ನಮಃ 108

ಶ್ರೀಮಚ್ಛಂಕರಭಗವತ್ಪಾದಾಚಾರ್ಯಸ್ವಾಮಿನೇ ನಮಃ

82. ಶ್ರೀಚಕ್ರರೂಪದ ಕರ್ಣಾಭರಣವನ್ನು ಸಮರ್ಪಿಸಿ ಅಮ್ಮನವರನ್ನು ಸಂತೋಷಗೊಳಿಸಿದವರು
83. ಬ್ರಹ್ಮಸೂತ್ರಭಾಷ್ಯ–ಉಪನಿಷದ್ಭಾಷ್ಯ ಮುಂತಾದ ಗ್ರಂಥಗಳನ್ನು ರಚಿಸಿದವರು
84. ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿದವರು
85. ತೀಕ್ಷ್ಣಬುದ್ಧಿಯುಳ್ಳವರು
86. ಶ್ರುತಿವಿರುದ್ಧವಾದ ಎಪ್ಪತ್ತೆರಡು ಮತಗಳನ್ನು ಖಂಡಿಸಿದವರು
87. ಎಲ್ಲಾ ಕಡೆಗಳಲ್ಲೂ ದಿಗ್ವಿಜಯವನ್ನು ಮಾಡಿದವರು
88. ಕಾಷಾಯವಸ್ತ್ರವನ್ನು ಧರಿಸಿರುವವರು
89. ಭಸ್ಮಾಲಂಕೃತ ಶರೀರವುಳ್ಳವರು
90. ಜ್ಞಾನಸ್ವರೂಪವಾದ ದಂಡವನ್ನು ಧರಿಸಿರುವವರು
91. ಕಮಂಡಲುವನ್ನು ಕೈಯಲ್ಲಿ ಧರಿಸಿದವರು
92. ಭೂಮಂಡಲಕ್ಕೆ ಆಚಾರ್ಯರಾಗಿರತಕ್ಕಂತಹ ಗುರುಶ್ರೇಷ್ಠರು
93. ಭಗವತ್ಪಾದರೆಂದು ಪ್ರಸಿದ್ಧರಾದವರು
94. ವೇದವ್ಯಾಸರ ದರ್ಶನದಿಂದ ಸಂತುಷ್ಟರಾದವರು
95. ಶೃಂಗೇರಿಕ್ಷೇತ್ರದ ಅಧೀಶ್ವರರು
96. ಸೌಂದರ್ಯಲಹರೀ ಮುಂತಾದ ಅನೇಕ ಸ್ತೋತ್ರಗಳನ್ನು ರಚಿಸಿರುವವರು
97. ಅರವತ್ತನಾಲ್ಕು ಕಲೆಗಳನ್ನು ತಿಳಿದವರು
98. ಬ್ರಹ್ಮರಾಕ್ಷಸನಿಗೆ ಮೋಕ್ಷವನ್ನಿತ್ತವರು
99. ಬ್ರಹ್ಮಾವತಾರವಾದ ಮಂಡನಮಿಶ್ರರಿಂದ ಸ್ತುತಿಸಲ್ಪಟ್ಟವರು
100. ಶ್ರೀತೋಟಕಾಚಾರ್ಯರಿಂದ ಸೇವಿಸಲ್ಪಟ್ಟವರು
101. ಶ್ರೀಪದ್ಮಪಾದಾಚಾರ್ಯರಿಂದ ಪೂಜಿಸಲ್ಪಟ್ಟವರು
102. ಶ್ರೀಹಸ್ತಾಮಲಕಾಚಾರ್ಯರಿಗೆ ಬ್ರಹ್ಮಜ್ಞಾನವನ್ನು ಅನುಗ್ರಹಿಸಿದವರು
103. ಸುರೇಶ್ವರಾಚಾರ್ಯರಿಗೆ ಸಂನ್ಯಾಸಾಶ್ರಮವನ್ನು ನೀಡಿದವರು
104. ನರಸಿಂಹ ದೇವರ ಭಕ್ತರು
105. ರತ್ನಗರ್ಭ ಗಣಪತಿಯನ್ನು ಪೂಜಿಸುವವರು
106. ವ್ಯಾಖ್ಯಾನ ಸಿಂಹಾಸನಕ್ಕೆ ಅಧಿಪತಿಗಳು
107. ಎಲ್ಲರಿಂದಲೂ ಪೂಜಿಸಲ್ಪಡುವವರು
108. ಜಗತ್ತಿಗೆ ಗುರುಗಳು

ಶ್ರೀಶಂಕರಭಗವತ್ಪಾದಾಚಾರ್ಯರಿಗೆ ನಮಸ್ಕಾರ

# ದಕ್ಷಿಣಾಮ್ನಾಯ ಶ್ರೀಶಾರದಾಪೀಠ, ಶೃಂಗೇರಿ



ಶೃಂಗೇರಿ ಶ್ರೀಶಾರದಾಂಬೆ

ಶ್ರೀಆದಿಶಂಕರಭಗವತ್ಪಾದರು 1200 ವರ್ಷಗಳ ಹಿಂದೆ ಅಳಿವಿನಂಚಿನಲ್ಲಿದ್ದ ಸನಾತನಧರ್ಮವನ್ನು ಪುನರುದ್ಧರಿಸಿ, ಧರ್ಮಪ್ರಚಾರ ನಿಮಿತ್ತ ಚತುರಾಮ್ನಾಯಪೀಠಗಳಲ್ಲಿ ಮೊದಲನೆಯ ಪೀಠವನ್ನು ಭಾರತದ ದಕ್ಷಿಣದಿಕ್ಕಿನಲ್ಲಿರುವ ಕರ್ನಾಟಕದ ಶೃಂಗೇರಿಕ್ಷೇತ್ರದಲ್ಲಿ ಸ್ಥಾಪಿಸಿರುತ್ತಾರೆ.


ಭಗವತ್ಪಾದರು ತಮ್ಮ ಪ್ರಧಾನ ಶಿಷ್ಯರಾದ ಸುರೇಶ್ವರಾಚಾರ್ಯರನ್ನು ಈ ಪೀಠದ ಮೊದಲ ಅಧಿಪತಿಗಳನ್ನಾಗಿ ನೇಮಿಸಿದರು. ಅಲ್ಲಿಂದ ಇಲ್ಲಿಯವರೆಗೂ ವಿದ್ಯಾತಪೋಮೂರ್ತಿಗಳು ಹಾಗೂ ಜೀವನ್ಮುಕ್ತರುಗಳಾದ ಯತಿವರೇಣ್ಯರನ್ನೊಳಗೊಂಡ ಅವಿಚ್ಛಿನ್ನವಾದ ಗುರುಪರಂಪರೆಯು ನಿರಂತರವಾಗಿ ಮುಂದುವರೆಯುತ್ತಾ ಬಂದಿರುತ್ತದೆ. ಈ ಪರಂಪರೆಯಲ್ಲಿ



ಬಂದಂತಹ ಯತಿವರೇಣ್ಯರುಗಳು ತಮ್ಮ ದೃಢತಪಸ್ಸಿನ ಬಲದಿಂದ ಸ್ವತಃ ಆದಿಶಂಕರಾಚಾರ್ಯರ ಸ್ವರೂಪದಲ್ಲಿ ಗೋಚರಿಸಿದರು. ದೇವಿ ಶಾರದೆಯ ವಾಸಸ್ಥಾನ, ಜಗದ್ಗುರುಗಳ ಪಾಂಡಿತ್ಯದ ಸಂಗಮವಾಗಿರುವ ಶೃಂಗೇರಿಯು ಸಾಧಕರಿಗೆ ಪವಿತ್ರ ಶ್ರದ್ಧಾಕೇಂದ್ರವಾಗಿದ್ದಲ್ಲದೆ, ಸಾಂಪ್ರದಾಯಿಕವಾಗಿ ಬಂದ ವಿದ್ಯೆಯನ್ನು ಕಲಿಯುವ ಬೀಡಾಗಿದೆ. ಜಗದ್ಗುರುಗಳು ವೇದಶಾಸ್ತ್ರಗಳ ಹಾಗೂ ಆದಿಶಂಕರಾಚಾರ್ಯರ ಭಾಷ್ಯಗ್ರಂಥಗಳ ಸಂರಕ್ಷಣೆ ಮತ್ತು ಪ್ರಚಾರದಲ್ಲಿ ನಿರತರಾಗಿರುತ್ತಾರೆ. ತಾವು ಸ್ವತಃ ಅನೇಕ ಸ್ವತಂತ್ರ ಕೃತಿಗಳನ್ನು ರಚಿಸಿ, ನಾನಾರೂಪಗಳಲ್ಲಿರುವ ಒಬ್ಬನೇ ಭಗವಂತನನ್ನು ಆರಾಧಿಸುವಲ್ಲಿ ಆಸ್ತಿಕರಿಗೆ ಮಹೋಪಕಾರವನ್ನು ಮಾಡಿರುತ್ತಾರೆ.


ಶೃಂಗೇರಿಯ ಶ್ರೀಶಾರದಾಪೀಠವು ವ್ಯಾಖ್ಯಾನ ಸಿಂಹಾಸನವೆಂದು, ಇಲ್ಲಿನ ಜಗದ್ಗುರುಗಳು ವ್ಯಾಖ್ಯಾನ ಸಿಂಹಾಸನದ ಅಧಿಪತಿಗಳೆಂದೂ, ಸ್ವತಃ ಶ್ರೀಶಾರದೆಯು ಜಗದ್ಗುರುಗಳ ರೂಪದಲ್ಲಿ ಈ ಪೀಠವನ್ನು ಮುನ್ನಡೆಸುತ್ತಾಳೆಂಬ ನಂಬಿಕೆಯು ಇಲ್ಲಿದೆ.

14ನೆಯ ಶತಮಾನದಲ್ಲಿ ಪೀಠದ 12ನೆಯ ಜಗದ್ಗುರುಗಳು ಶ್ರೀವಿದ್ಯಾರಣ್ಯ ಮಹಾಸ್ವಾಮಿಗಳವರ ದಿವ್ಯಾನುಗ್ರಹದಲ್ಲಿ ಪ್ರಸಿದ್ಧ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಗೊಂಡಿತು. ಶ್ರೀವಿದ್ಯಾರಣ್ಯರ ದೈವಿಕ ಶಕ್ತಿಯಿಂದ ಪ್ರಭಾವಿತರಾದ ವಿಜಯನಗರದ ಅರಸರುಗಳು ಶೃಂಗೇರಿ ಜಗದ್ಗುರುಗಳಿಗೆ ಸಮಸ್ತ ರಾಜಲಾಂಛನಗಳೊಡನೆ 'ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ' 'ಶ್ರೀಮದ್ರಾಜಾಧಿರಾಜಗುರು' 'ಭೂಮಂಡಲಾಚಾರ್ಯ' ಎಂಬ ಬಿರುದುಗಳನ್ನಿತ್ತು, ಅನೇಕ ಭೂಮಿಗಳನ್ನು ಪೀಠಕ್ಕೆ ದತ್ತಿಯಾಗಿ ನೀಡಿದರು. ವಿದ್ಯಾರಣ್ಯ ಮಹಾಸ್ವಾಮಿಗಳಿಂದ ಆರಂಭವಾಗಿ ಇಂದಿಗೂ ನವರಾತ್ರಿಯ ಸಂದರ್ಭದಲ್ಲಿ ಜಗದ್ಗುರುಗಳು ಕಿರೀಟಾದಿ ರಾಜಲಾಂಛನಗಳನ್ನು ಧರಿಸುವ ಸಂಪ್ರದಾಯವನ್ನು ನಾವು ನೋಡಬಹುದು. ಶ್ರೀಶಾರದಾಪೀಠದ ಪರಂಪರೆಯಲ್ಲಿ ಬಂದ



ಶೃಂಗೇರಿಯ ಶ್ರೀವಿದ್ಯಾಶಂಕರ, ಶ್ರೀಶಾರದಾಂಬಾ ದೇವಾಲಯ ಮತ್ತು ರಾಜಗೋಪುರ

ಜಗದ್ಗುರುಗಳ ಜೀವನ ಸಾಧನೆಗಳು ಅಸಾಧಾರಣವಾದವುಗಳು. 33ನೆಯ ಅಧಿಪತಿಗಳಾದ ಜಗದ್ಗುರು ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳವರು, ಆದಿಶಂಕರರ ಜನ್ಮಸ್ಥಳವಾದ ಕಾಲಟಿಕ್ಷೇತ್ರವನ್ನು ಗುರುತಿಸಿದವರು; ಶೃಂಗೇರಿಯಲ್ಲಿ ಪ್ರಸಿದ್ಧವಾದ ಸದ್ವಿದ್ಯಾ ಸಂಜೀವಿನೀ ಸಂಸ್ಕೃತ ಮಹಾಪಾಠಶಾಲೆಯನ್ನು ಸ್ಥಾಪಿಸಿದವರು. ಆ ನಂತರ ಜಗದ್ಗುರು ಶ್ರೀಚಂದ್ರಶೇಖರಭಾರತೀ ಮಹಾಸ್ವಾಮಿಗಳು ಜೀವನ್ಮುಕ್ತರು, ಮಹಾತಪಸ್ವಿಗಳೂ ಆಗಿದ್ದು, ವಿವೇಕಚೂಡಾಮಣಿಯ ವ್ಯಾಖ್ಯಾನಕಾರರೂ ಆಗಿರುತ್ತಾರೆ. ಇವರ ಶಿಷ್ಯರಾದ ಜಗದ್ಗುರು ಶ್ರೀಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ಯೋಗನಿಷ್ಣಾತರಾಗಿದ್ದವರು.



ಜಗದ್ಗುರು ಶಂಕರಾಚಾರ್ಯ
ಶ್ರೀಶ್ರೀ ಭಾರತೀತೀರ್ಥ
ಮಹಾಸನ್ನಿಧಾನಂಗಳವರು

ಶ್ರೀಶಾರದಾಪೀಠದ ಅವಿಚ್ಛಿನ್ನ ಗುರುಪರಂಪರೆಯಲ್ಲಿ ಪ್ರಸ್ತುತ 36ನೆಯ ಅಧಿಪತಿಗಳಾದ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀಭಾರತೀತೀರ್ಥ ಮಹಾಸನ್ನಿಧಾನಂಗಳವರು ಜ್ಞಾನದ ನಿಧಿಯಾಗಿ ಸನಾತನಧರ್ಮದ ಸಿದ್ಧಾಂತಗಳನ್ನು ಎತ್ತಿಹಿಡಿದು ಶಿಷ್ಯರನ್ನು ಸನ್ಮಾರ್ಗದತ್ತ ಕೊಂಡೊಯ್ಯುತ್ತಿದ್ದಾರೆ.

ಜಗದ್ಗುರುಗಳ ಜೀವನವು ಸಂನ್ಯಾಸ ಧರ್ಮಕ್ಕೆ ಒಳಪಟ್ಟಿದ್ದು, ಅದರ ವಿಧಿಗಳನ್ನು ಚಾಚೂತಪ್ಪದೆ ನಡೆಸುತ್ತಾರೆ. ವೇದ ಹಾಗೂ ಶಾಸ್ತ್ರಗಳಲ್ಲಿ ತಳಸ್ಪರ್ಶಿಯಾದ ಪಾಂಡಿತ್ಯವಿದ್ದು, ವೇದಾಂತ, ತರ್ಕ, ಮಿಮಾಂಸಾ ಮತ್ತು ವ್ಯಾಕರಣ ಶಾಸ್ತ್ರಗಳಲ್ಲಿ ನಿಷ್ಣಾತರಾಗಿರುತ್ತಾರೆ. ಯೋಗ್ಯ ವಿದ್ಯಾರ್ಥಿಗಳಿಗೆ ಸ್ವತಃ ಜಗದ್ಗುರುಗಳವರು ವೇದಾಂತ ಮತ್ತು ತರ್ಕ ಶಾಸ್ತ್ರದಲ್ಲಿ ಪಾಠವನ್ನು ಮಾಡುತ್ತಾರೆ.

ಅಗಾಧ ಪಾಂಡಿತ್ಯ ಹಾಗೂ ಆಧ್ಯಾತ್ಮದ ಉತ್ತುಂಗ ಸ್ಥಿತಿಯಲ್ಲಿರುವ ಜಗದ್ಗುರುಗಳು ತಮ್ಮ ಬಳಿಗೆ ಬರುವ ಭಕ್ತರೆಲ್ಲರಿಗೂ ಅನುಗ್ರಹಿಸುತ್ತಿದ್ದಾರೆ. ಆದಿಶಂಕರಾಚಾರ್ಯರಿಂದ ಬಂದ ಈ ಪರಂಪರೆಗೆ ಜೀವಂತ ಸಾಕ್ಷಿಯಾಗಿರುವ ಜಗದ್ಗುರುಗಳು, ಸನಾತನಧರ್ಮದ ಸಂಪ್ರದಾಯವನ್ನು ಕಾಪಾಡುತ್ತ, ಆಧ್ಯಾತ್ಮದ ಮಾರ್ಗದಲ್ಲಿ ಸಾಗುವವರಿಗೆ ಮಾರ್ಗದರ್ಶನ ನೀಡುತ್ತಾರೆ. ನಿತ್ಯ ಸಾವಿರಾರು ಜನರು ಗುರುಗಳ ದರ್ಶನವನ್ನು ಪಡೆದು, ಅಪಾರ ಅನುಗ್ರಹಕ್ಕೆ ಪಾತ್ರರಾಗಿರುತ್ತಾರೆ. ಪ್ರತಿದಿನ ಎರಡು ಬಾರಿ ದರ್ಶನವನ್ನು

ಕೊಡುವ ಜಗದ್ಗುರುಗಳು ಜ್ಞಾನ, ಕರ್ಮ ಮತ್ತು ಭಕ್ತಿ ಮಾರ್ಗಗಳಲ್ಲಿ ತೊಡಗುವ ಸಾಧಕರನ್ನು ಅನುಗ್ರಹಿಸುತ್ತಾರೆ.

ಜಗದ್ಗುರುಗಳು ಧರ್ಮಪ್ರಚಾರಕ್ಕೋಸ್ಕರ ದೇಶಾದ್ಯಂತ ಅನೇಕ ಯಾತ್ರೆಗಳನ್ನು ಕೈಗೊಂಡಿದ್ದಾರೆ. ಸಂಸ್ಕೃತ, ಹಿಂದಿ, ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುತ್ತಾರೆ. ಪ್ರತಿಯೊಬ್ಬರು ಅವರವರ ಧರ್ಮವನ್ನು ಅನುಸರಿಸಬೇಕು, ಭಗವಂತನಲ್ಲಿ ಭಕ್ತಿಯನ್ನು, ಧರ್ಮದಲ್ಲಿ ಶ್ರದ್ಧೆಯನ್ನು ಹೊಂದಬೇಕು ಎಂದು ಧರ್ಮೋಪದೇಶಗಳನ್ನು ಮಾಡುತ್ತಾರೆ.

ತಾವು ಸ್ವತಃ ಧರ್ಮವನ್ನು ಅನುಸರಿಸುತ್ತ, ಧರ್ಮತತ್ತ್ವಗಳನ್ನು ಉಪದೇಶಿಸುತ್ತ, ಇಂದಿನ ಯಾಂತ್ರಿಕ ಕಾಲದಲ್ಲೂ ಅರ್ಥಪೂರ್ಣವಾದ, ತೃಪ್ತಿಕರವಾದ ಜೀವನವನ್ನು ನಡೆಸಬಹುದೆಂದು ತೋರಿಸಿಕೊಟ್ಟಿದ್ದಾರೆ.



ಜಗದ್ಗುರು ಶಂಕರಾಚಾರ್ಯ
ಶ್ರೀಶ್ರೀ ವಿಧುಶೇಖರಭಾರತೀ
ಸನ್ನಿಧಾನಂಗಳವರು

ಜಗದ್ಗುರು ಶ್ರೀಮಹಾಸನ್ನಿಧಾನಂಗಳವರು 2015 ರಲ್ಲಿ 22 ವರ್ಷದ ಸಕಲಸದ್ಗುಣ ಸಂಪನ್ನರಾದ ಕುಪ್ಪಾ ವೆಂಕಟೇಶ್ವರಪ್ರಸಾದ ಶರ್ಮಾ ಎಂಬ ಬ್ರಹ್ಮಚಾರಿಗೆ ಸಂನ್ಯಾಸ ದೀಕ್ಷೆಯನ್ನು ಅನುಗ್ರಹಿಸಿ, “ಶ್ರೀ ವಿಧುಶೇಖರಭಾರತೀ” ಎಂಬ ಯೋಗಪಟ್ಟವನ್ನು ನೀಡಿ ತಮ್ಮ ಉತ್ತರಾಧಿಕಾರಿ ಶಿಷ್ಯರನ್ನಾಗಿಸ್ವೀಕರಿಸಿದ್ದಾರೆ.

ಜಗದ್ಗುರು ಶ್ರೀಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು ನ್ಯಾಯ ಹಾಗೂ ವೇದಾಂತಾದಿಶಾಸ್ತ್ರಗಳನ್ನು ಶ್ರೀ ಮಹಾಸನ್ನಿಧಾನಂಗಳವರಲ್ಲಿಯೇ ಅಧ್ಯಯನ ಮಾಡಿ, ವೇದ ಹಾಗೂ ಶಾಸ್ತ್ರಗಳಲ್ಲಿ ಮಹಾಪಂಡಿತರಾಗಿದ್ದಾರೆ. ತಮ್ಮ ಗುರುಗಳು ತೋರಿಸಿದ ಮಾರ್ಗವನ್ನೇ ಅನುಸರಿಸುತ್ತಾ, ಅವರ ಜೊತೆಯಲ್ಲಿ ಅನೇಕ ವಿಜಯಯಾತ್ರೆಗಳನ್ನು ಮಾಡಿ, ಸಂನ್ಯಾಸ ಧರ್ಮವನ್ನು ಪಾಲಿಸುತ್ತಾ, ಎಲ್ಲ ಭಕ್ತರನ್ನು ವಾತ್ಸಲ್ಯದಿಂದ ಕಾಣುತ್ತಾ ಸಕಲರನ್ನೂ ಅನುಗ್ರಹಿಸುತ್ತಿದ್ದಾರೆ.

# ನಾಲ್ಕು ಆಮ್ನಾಯ ಪೀಠಗಳು

| | ಪೂರ್ವ | ದಕ್ಷಿಣ | ಪಶ್ಚಿಮ | ಉತ್ತರ |
|---|---|---|---|---|
| **ಪೀಠ** | ಗೋವರ್ಧನ ಪೀಠ | ಶಾರದಾ ಪೀಠ | ಕಾಳಿಕಾ ಪೀಠ | ಜ್ಯೋತಿಷ್ ಪೀಠ |
| **ಸ್ಥಳ** | ಪುರಿ (ಒರಿಸ್ಸಾ) | ಶೃಂಗೇರಿ (ಕರ್ನಾಟಕ) | ದ್ವಾರಕಾ (ಗುಜರಾತ್) | ಬದರಿಕಾಶ್ರಮ (ಉತ್ತರಾಖಂಡ) |
| **ವೇದ** | ಋಗ್ವೇದ | ಯಜುರ್ವೇದ | ಸಾಮವೇದ | ಅಥರ್ವವೇದ |
| **ಮೊದಲ ಪೀಠಾಧಿಪತಿಗಳು** | ಹಸ್ತಾಮಲಕಾಚಾರ್ಯರು | ಸುರೇಶ್ವರಾಚಾರ್ಯರು | ಪದ್ಮಪಾದಾಚಾರ್ಯರು | ತೋಟಕಾಚಾರ್ಯರು |
| **ಮಹಾವಾಕ್ಯ** | ಪ್ರಜ್ಞಾನಂ ಬ್ರಹ್ಮ | ಅಹಂ ಬ್ರಹ್ಮಾಸ್ಮಿ | ತತ್ತ್ವಮಸಿ | ಅಯಮಾತ್ಮಾ ಬ್ರಹ್ಮ |
| **ದೇವತೆಗಳು** | ಜಗನ್ನಾಥ<br>ಶಕ್ತಿ – ವಿಮಲಾದೇವಿ | ಮಲಹಾನಿಕರೇಶ್ವರ<br>ವರಾಹ, ಶಕ್ತಿ – ಶಾರದಾ | ಸಿದ್ಧೇಶ್ವರ<br>ಶಕ್ತಿ – ಭದ್ರಕಾಳಿ | ನಾರಾಯಣ<br>ಶಕ್ತಿ – ಪೂರ್ಣಗಿರಿ |
| **ತೀರ್ಥಗಳು** | ಮಹೋದಧಿ (ಬಂಗಾಳಕೊಲ್ಲಿ) | ತುಂಗಭದ್ರಾ ನದಿ | ಗೋಮತೀ ನದಿ | ಅಲಕನಂದಾ ನದಿ |
| **ಸಂಪ್ರದಾಯ** | ಭೋಗವಾಳ | ಭೂರಿವಾಳ | ಕೀಟವಾಳ | ನಂದವಾಳ |
| **ಯೋಗಪಟ್ಟ** | ಅರಣ್ಯ, ವನ | ಸರಸ್ವತೀ, ಪುರೀ, ಭಾರತೀ, ಅರಣ್ಯ, ತೀರ್ಥ, ಗಿರಿ, ಆಶ್ರಮ | ತೀರ್ಥ, ಆಶ್ರಮ | ಗಿರಿ, ಪರ್ವತ, ಸಾಗರ |